## ಅಧ್ಯಾಯ–೮

# ಸಾರ್ವಜನಿಕ ಆಡಳಿತ

**ಪ್ರಾಚೀನ ಕಾಲದ ಆಡಳಿತ ವ್ಯವಸ್ಥೆ :** ಪಿರಿಯಾಪಟ್ಟಣವು ಕದಂಬ, ಗಂಗ, ಚಾಲುಕ್ಯ, ಚೋಳ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿದ್ದು ಅವರ ಅಧೀನದಲ್ಲಿ ಈ ವಲಯದ ನೇರ ರಾಜ್ಯಭಾರ ಮಾಡಿದವರು ಸಾಮಂತರಾಗಿದ್ದ ಚಂಗಾಳ್ವರು. ಈ ಪ್ರದೇಶದಲ್ಲಿ ಸ್ವಾತಂತ್ರ್ಯಪೂರ್ವದಿಂದ ಗೌಡಿಕೆ, ಯಜಮಾನಿಕೆ, ಪಟೇಲಿಕೆ ಮುಂತಾದ ವ್ಯವಸ್ಥೆಗಳು ಅಸ್ತಿತ್ವದಲ್ಲಿದ್ದವು. ಪಟೇಲರು ತಾಲೂಕಿನ ಯಜಮಾನರಂತಿದ್ದು ಸ್ಥಳೀಯ ನ್ಯಾಯಾಧೀಶರಾಗಿಯೂ ಕೆಲಸ ನಿರ್ವಹಿಸುತ್ತಿದ್ದರು. ತಾಲ್ಲೂಕಿನ ಜನನ – ಮರಣಗಳ ನೋಂದಣಿ ಇವರ ಕಿರ್ದಿಯಲ್ಲಿರುತ್ತಿದ್ದವು. ಪಟೇಲರ ಮಾರ್ಗದರ್ಶನದಲ್ಲಿ ಶ್ಯಾನುಭೋಗರು ಕಂದಾಯ ದಾಖಲಾತಿ, ವಸೂಲಾತಿ, ಭೂದಾಖಲಾತಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಪಟೇಲರು ಪಂಚಾಯ್ತಿ ಕಟ್ಟೆಗಳಲ್ಲಿ ಊರ ಪ್ರಮುಖರೆದುರು ತಪ್ಪಿತಸ್ಥರಿಗೆ ದಂಡ ವಿಧಿಸುತ್ತಿದ್ದರು. ಪಂಚಾಯತ್ ರಾಜ್ ವ್ಯವಸ್ಥೆಯು ಜಾರಿಗೆ ಬಂದ ನಂತರ ಗ್ರಾಮಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದರೆ, ತಾಲ್ಲೂಕಿನಲ್ಲಿ ತಾಲೂಕು ಮಂಡಳಿಗಳು ಹಾಗೂ ತಾಲ್ಲೂಕು ಕಛೇರಿಗಳು ಅಸ್ತಿತ್ವಕ್ಕೆ ಬಂದವು. ತಾಲೂಕಿನ ದಂಡಾಧಿಕಾರಿಯಾಗಿ ತಹಶೀಲ್ದಾರರು, ನೇಮಕವಾದರು. ಅವರಿಗೆ ಸಹಾಯಕರಾಗಿ ಶಿರಸ್ತೇದಾರರು, ಕಂದಾಯ ನಿರೀಕ್ಷಕರು ಹಾಗೂ ಗ್ರಾಮಲೆಕ್ಕಿಗರು ನೇಮಕಗೊಂಡರು. ಕಾನೂನು ಸುವ್ಯವಸ್ಥೆ ಕಾಪಾಡಲು ಆರಕ್ಷಕ ಠಾಣೆಗಳು ತಾಲ್ಲೂಕಿನಲ್ಲಿ ಅಸ್ತಿತ್ವಕ್ಕೆ ಬಂದವು.

**ತಹಶೀಲ್ದಾರರು :** ಹಿಂದೆ ಅಮಿಲ್ದಾರ(ಮಾಮಲೆದಾರ)ರೆಂದೂ ಕರೆಯಲ್ಪಡುತ್ತಿದ್ದ ಇವರು ತಾಲೂಕಿನ ಸಾಮಾನ್ಯ ಆಡಳಿತದ ಮಂಚೂಣಿಯಲ್ಲಿದ್ದು, ಇವರ ನೆರವಿಗೆ ಶಿರಸ್ತೇದಾರ್ (ಉಪತಹಶೀಲ್ದಾರ್), ಕಂದಾಯ ವೃತ್ತಗಳಲ್ಲಿ ಕಂದಾಯ ನಿರೀಕ್ಷಕರು, ವಿಶೇಷ ಕಂದಾಯ ನಿರೀಕ್ಷಕ, ದಾಖಲೆ ರಕ್ಷಕ ಹಾಗೂ ಇತರ ಸಿಬ್ಬಂದಿ ವರ್ಗವಿದೆ. ಉಪವಿಭಾಗಾಧಿಕಾರಿಗಳು ಇವರ ತಕ್ಷಣದ ಮೇಲಧಿಕಾರಿಗಳಾಗಿದ್ದು ಜಿಲ್ಲಾಧಿಕಾರಿಗಳ ಸೂಚನೆಯಂತೆ ಇವರು ಕಾರ್ಯನಿರ್ವಹಿಸುತ್ತಾರೆ. ತಾಲೂಕಿನಲ್ಲಿ ಭೂಒತ್ತುವರಿ ಸೇರಿದಂತೆ ವಿವಿಧ ಭೂ ವ್ಯವಹಾರಗಳಿಗೆ ಸಂಬಂಧಿಸಿದಂತೆ, ನಿರ್ಣಾಯಕ ಪಾತ್ರವಹಿಸುವ ಇವರು ಕಂದಾಯ

ಆಕರಣೆ ಮತ್ತು ಸಂಗ್ರಹಣೆ, ತಕಾವಿ ಸಾಲ ಮರುಪಾವತಿ, ಭೂಅಭಿವೃದ್ಧಿ ಸಾಲದ ಸದ್ವಿನಿಯೋಗದ ಪರಿಶೀಲನೆ, ನೀರಾವರಿ ಶುಲ್ಕ, ಪೊಟ್‌ಹಿಸ್ಸಾ, ಮಾಪನ ಶುಲ್ಕ ಸಂಗ್ರಹ ಮುಂತಾದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ತಾಲೂಕಿನ ಮುಖ್ಯಸ್ಥನಾಗಿ ಆಹಾರ ದಾಸ್ತಾನುಗಳ ಕ್ರಮಬದ್ಧ ಖರೀದಿ ಹಾಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ವ್ಯವಸ್ಥಿತವಾಗಿ ವಿತರಣೆ ಮಾಡುವ ಹೊಣೆಯೂ ಇವರದಾಗಿದ್ದು, ಲೆವಿ–ಬತ್ತ, ಅಕ್ಕಿ ಸಂಗ್ರಹಣೆ, ಜೊತೆಗೆ ವಿವಿಧ ಅಕ್ಕಿಗಿರಣಿಗಳಲ್ಲಿ ಹಾಗೂ ಕೃಷಿ ಉತ್ಪನ್ನ ಸಹಕಾರಿ ಮಾರುಕಟ್ಟೆ ಸಂಘಗಳಲ್ಲಿರುವ ದಾಸ್ತಾನುಗಳ ಪರಿಶೀಲನೆ ಮಾಡಬೇಕಾಗುತ್ತದೆ. ವೃದ್ಧಾಪ್ಯವೇತನ ಮಂಜೂರು ಮಾಡುವುದು ಇವರ ಕರ್ತವ್ಯವಾಗಿದ್ದು, ತಾಲೂಕು ಮಾಜಿಸ್ಟ್ರೇಟರಾಗಿ ತಾಲೂಕಿನಲ್ಲಿ ಶಾಂತಿ ಹಾಗೂ ಕಾನೂನು ಪರಿಪಾಲಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವ ಅಧಿಕಾರವೂ ಇವರಿಗಿರುತ್ತದೆ. ಸಹಾಯಕ ಚುನಾವಣಾ ನೊಂದಣಾಧಿಕಾರಿಯಾಗಿ, ಮತಪಟ್ಟಿಯ ರಚನೆ, ಪರಿಷ್ಕರಣೆ ಇವರ ಜವಾಬ್ದಾರಿಯಾಗಿದ್ದು, ತಾಲೂಕು ಮಟ್ಟದಲ್ಲಿ ಸಹಾಯಕ ನಿರ್ವಾಚನ ಚುನಾವಣಾಧಿಕಾರಿಯಾಗಿ ಚುನಾವಣೆಯ ಉಸ್ತುವಾರಿಯನ್ನು ನಿರ್ವಹಿಸಬೇಕಾಗುತ್ತದೆ.

**ಕ್ಷೇತ್ರಾಭಿವೃದ್ಧಿ ಅಧಿಕಾರಿ ಕಚೇರಿ :** ತಾಲೂಕಿನ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಹಾಗೂ ನಿರ್ವಹಣೆ ಈ ಅಧಿಕಾರಿಯ ಹೊಣೆಯಾಗಿದ್ದು, ತಾಲೂಕು ಅಭಿವೃದ್ಧಿ ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರಾಗಿರುತ್ತಿದ್ದರು. ಆದರೆ ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆ ಹಾಗೂ ೧೯೯೩ರ ಜಿಲ್ಲಾ ಪಂಚಾಯತ್ ಕಾಯ್ದೆಗಳಿಂದಾಗಿ ಇಂದು ತಾಲೂಕು ಪಂಚಾಯಿತಿ ಸಮಿತಿ ಎಂದು ನಾಮಾಂಕಿತಗೊಂಡಿದ್ದು, ನಿರ್ವಾಹಣಾಧಿಕಾರಿಗಳು ಮುಖ್ಯಸ್ಥರಿದ್ದು, ಜಿಲ್ಲಾ ಪಂಚಾಯತಿಯ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದ್ದು, ಅವರ ನೆರವಿಗೆ ವ್ಯವಸ್ಥಾಪಕರು ಹಾಗೂ ಇತರ ಸಿಬ್ಬದಿ ವರ್ಗವಿರುತ್ತದೆ.

**ಕಂದಾಯ ನಿರೀಕ್ಷಕರು :** ತಾಲೂಕಿನಲ್ಲಿರುವ ಐದು ಹೋಬಳಿ ಕಂದಾಯ ವೃತ್ತಗಳ ಆಡಳಿತ ನಿರ್ವಹಣೆಗೆ ಪ್ರತ್ಯೇಕ ಕಂದಾಯ ನಿರೀಕ್ಷಕರಿರುತ್ತಾರೆ. ಕಂದಾಯ ವಿಷಯಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರ ನೇರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುವ ಕಂದಾಯ ನಿರೀಕ್ಷಕರು ಭೂಕಂದಾಯ, ಅಭಿವೃದ್ಧಿ ಶುಲ್ಕ, ನೀರಾವರಿ ಶುಲ್ಕ, ಇತರೆ ಸರ್ಕಾರಿ ಬಾಕಿ, ಸಾಲ ಹಾಗೂ ಮುಂಗಡಗಳ ಮರುಪಾವತಿ ಮುಂತಾದವುಗಳ ಶೇಖರಣೆ, ಆಹಾರಧಾನ್ಯಗಳ ಖರೀದಿ ಮತ್ತು ವಿತರಣೆ ಮುಂತಾದವುಗಳನ್ನು ನಿಭಾಯಿಸಬೇಕಾಗುತ್ತದೆ. ಗ್ರಾಮಲೆಕ್ಕಿಗರ ಕಾರ್ಯವೈಖರಿಯ ಮೇಲ್ವಿಚಾರಕರಾಗಿದ್ದು, ಗ್ರಾಮಗಡಿಯ ತಪಾಸಣೆ, ಸರ್ಕಾರಿ ಜಮೀನಿನ ಒತ್ತುವರಿ ಮುಂತಾದವನ್ನೂ ಗಮನಿಸಬೇಕಾಗುತ್ತವೆ. ಉಂಬಳಿ ಜಮೀನಿನ ದಾಖಲೆಗಳ ಸಂಯೋಜನೆ, ಭೂಸ್ವಾಧೀನಗಳಂತಹ ಕಂದಾಯ ವಿಷಯಗಳ ಜೊತೆಗೆ, ವೃದ್ಧಾಪ್ಯವೇತನ ಮಂಜೂರಾತಿಗೆ ಪೂರಕ ತಪಾಸಣೆಯಂತಹ ಕಾರ್ಯಗಳನ್ನು ಇವರು ನಿರ್ವಹಿಸಬೇಕಾಗುತ್ತದೆ.

**ನಾಡಕಚೇರಿ :** ಅಧಿಕಾರ ವಿಕೇಂದ್ರೀಕರಣ ಹಾಗೂ ತಾಲೂಕು ಕಚೇರಿಗಳ ಮೇಲಿನ ಕಾರ್ಯಒತ್ತಡವನ್ನು ಹಗುರಗೊಳಿಸುವುದಕ್ಕಾಗಿ ೧೫-೦೮-೧೯೮೬ರಿಂದ ತಾಲೂಕಿನಲ್ಲೊಂದು ಹೋಬಳಿ ಕೇಂದ್ರದಲ್ಲಿ ನಾಡಕಚೇರಿಯನ್ನು ಪ್ರಯೋಗಾರ್ಥವಾಗಿ ಆರಂಭಿಸಲು ಹಮ್ಮಿಕೊಂಡ ಯೋಜನೆಯಂತೆ ತಾಲೂಕಿನಲ್ಲೂ ನಾಡಕಚೇರಿಯನ್ನು ಆರಂಭಿಸಲಾಗಿದೆ. ಈ ಕಚೇರಿಗೆ ಶಿರಸ್ತೇದಾರರು ಮುಖ್ಯಸ್ಥರಾಗಿದ್ದು, ತಹಶೀಲ್ದಾರರ ಒಂಭತ್ತು ಕಾರ್ಯಗಳ ನಿರ್ವಹಣೆಯನ್ನು ಇವರಿಗೆ ವಹಿಸಿಕೊಡಲಾಗಿದೆ. ಅವರ ನೆರವಿಗೆ ಸಿಬ್ಬಂದಿವರ್ಗವಿದ್ದು, ತಹಶೀಲ್ದಾರರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

**ಗ್ರಾಮಲೆಕ್ಕಿಗರು :** ಪ್ರಾಚೀನ ಕಾಲದಲ್ಲಿ ಗ್ರಾಮಗಳ ಆಡಳಿತ ನಿರ್ವಹಣೆಗೆ ಆರಂಭದಲ್ಲಿ ಎಂಟು ನಂತರ ಹನ್ನೆರಡು ಜನ ಆಯಗಾರರು (ಬಾರಾಬಲೂತಿ) ಗ್ರಾಮದ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ೧೯೪೭ರ ವೇಳೆಗೆ ಅವುಗಳಲ್ಲಿ ಗೌಡ, ಶಾನುಭೋಗ, ತೋಟಿ, ತಲಾರಿ ಹಾಗೂ ನೀರ್ಗಂಟಿಗಳಷ್ಟೆ ಚಾಲ್ತಿಯಲ್ಲಿ ಉಳಿದಿದ್ದರು. ಆದರೆ ಸ್ವಾತಂತ್ರ್ಯನಂತರದಲ್ಲಿ ಇದ್ದ ವಂಶವಾರು ಶಾನುಭೋಗಿಕೆಯನ್ನು ೧೯೭೦ರ ಕಾಯ್ದೆಯನ್ವಯ ರದ್ದುಗೊಳಿಸಲಾಯಿತು. ಆಗ ಗ್ರಾಮಾಡಳಿತವನ್ನು ಗ್ರಾಮಲೆಕ್ಕಿಗರಿಗೆ ವಹಿಸಿಕೊಡಲಾಯಿತು. ಆಡಳಿತದ ಕೆಳಘಟಕದ ಮುಖ್ಯಸ್ಥರಾದ ಇವರು ಸರ್ಕಾರ ಸಮಾಜಗಳ ನಡುವಣ ಕೊಂಡಿಯಾಗಿದ್ದು, ಗ್ರಾಮದಾಖಲೆಗಳ ಸಂರಕ್ಷಣೆ ಹಾಗೂ ಕಂದಾಯ ಶೇಖರಣೆ ಇವರ ಹೊಣೆಯಾಗಿರುತ್ತದೆ. ಹಿಂದಿನ ಶಾನುಭೋಗರ ಅಧಿಕಾರಗಳನ್ನೇ ಹೊಂದಿರುವ ಇವರ ನೆರವಿಗೆ ಗ್ರಾಮಸಹಾಯಕರಿರುತ್ತಾರೆ.

**ಗ್ರಾಮಸಹಾಯಕರು :** ಹಿಂದೆ ಗ್ರಾಮಗಳಲ್ಲಿ ಶಾನುಭೊಗ, ಕುಲಕರ್ಣಿ ಅಥವಾ ಪಾಟೀಲರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ತಳವಾರ, ಓಲೇಕಾರ, ತೋಟಿ ಮುಂತಾದ ಹುದ್ದೆಗಳಿಗೆ ಬದಲು, ಪ್ರಸ್ತುತ ಗ್ರಾಮಸಹಾಯಕರನ್ನು ನೇಮಿಸಲಾಗಿದೆ. ಗ್ರಾಮಸಿಪಾಯಿ ಎಂದೂ ಕೆಲವೆಡೆ ಕರೆಯಲ್ಪಡುವ ಇವರು ಗ್ರಾಮಲೆಕ್ಕಿಗರ ಸಹಾಯಕರಾಗಿ, ಸಂದೇಶವಾಹಕರಾಗಿ ದಫ್ತರು ಸಾಗಿಸುವ ಹಾಗೂ ಭೂಸರ್ವೇಕ್ಷಣ ಸಂದರ್ಭದಲ್ಲಿ ಜಮೀನನ್ನು ಅಳೆಯಲು ಬಳಸುವ ಸರಪಳಿ ಮುಂತಾದ ಸಲಕರಣೆಗಳನ್ನು ಸಾಗಿಸಲು ಕೆಲಸಗಳಲ್ಲಿ ನೆರವಾಗುತ್ತಾರೆ.

**ಸಾಮಾನ್ಯ ಆಡಳಿತ ಮತ್ತು ಕಂದಾಯ ಆಡಳಿತ :** ತಾಲೂಕಿನಲ್ಲಿ ಕಸಬಾ, ಹಾರ್‍ನಹಳ್ಳಿ, ರಾವಂದೂರು ಮತ್ತು ಬೆಟ್ಟದಪುರ ಹೋಬಳಿಗಳಿವೆ. ಗ್ರಾಮಪಂಚಾಯ್ತಿ ಮತ್ತು ತಾಲೂಕು ಮಂಡಳಿಗಳು, ಜನತಾ ಪ್ರತಿನಿಧಿ ಸಭೆಗಳಾಗಿವೆ. ಪೋಲೀಸ್, ಆರೋಗ್ಯ, ಶಿಕ್ಷಣ, ಕೃಷಿ ಮುಂತಾದ ಇಲಾಖೆಗಳು ತಾಲೂಕಿನಲ್ಲಿ ಪ್ರಾರಂಭವಾಗಿವೆ. ಪ್ರತಿ ಹೋಬಳಿಗೆ ಕಂದಾಯಾಧಿಕಾರಿಗಳು ನೇಮಕಗೊಂಡರು. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ತಹಶೀಲ್ದಾರರ ಕಛೇರಿ ಕಾರ್‍ಯನಿರ್ವಹಿಸುತ್ತಿದೆ. ಇದು ತನ್ನ ಉಪಕಛೇರಿಗಳನ್ನು ಹೋಬಳಿ ಮಟ್ಟದಲ್ಲಿ ಹೊಂದಿದೆ. ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ ಕಾರ್ಯದರ್ಶಿಗಳು ಕಾರ್ಯ ನಿರ್ವಹಿಸುತ್ತಾರೆ. ಇತ್ತೀಚೆಗೆ ಕಂದಾಯ ಇಲಾಖೆಯು ಗಣಕೀಕೃತಗೊಂಡು ತಾಲೂಕಿನ

ಸಾರ್ವಜನಿಕರಿಗೆ ಅನುಕೂಲವಾಗಿದೆ. ತಾಲೂಕಿನಲ್ಲಿ ತಾಲೂಕು ಉಪ ಖಜಾನೆಯು ಕಾರ್ಯನಿರ್ವಹಿಸುತ್ತಿದೆ.

**ಕಂದಾಯ ಆಡಳಿತ :** ಆಡಳಿತಯಂತ್ರದ ನಿರ್ವಹಣೆ ಹಾಗೂ ಸಮಾಜಕಲ್ಯಾಣಕಾರ್ಯಗಳ ಅನುಷ್ಠಾನಕ್ಕಾಗಿ ಭೂಕಂದಾಯ, ಆಸ್ತಿತೆರಿಗೆ, ಪ್ರವೇಶಶುಲ್ಕ, ವೃತ್ತಿ ತೆರಿಗೆ, ಮುಂತಾದ ತೆರಿಗೆಗಳನ್ನು ಬಹು ಹಿಂದಿನಿಂದಲೂ ವಿಧಿಸಲಾಗುತ್ತಿತ್ತು. ಅದರಲ್ಲೂ ಕೃಷಿ ಪ್ರಧಾನ ಸಮಾಜದಲ್ಲಿ ಭೂಕಂದಾಯವೇ ಸರ್ಕಾರಗಳ ಪ್ರಧಾನ ಆದಾಯ ಮೂಲವಾಗಿತ್ತು. ಭೂಮಾಪನ ಆಧಾರಿತ ಕಳನಿ, ಮತ್ತರು, ನಿವರ್ತನ, ಕಂಬ, ಕುಳಿಗಳೆಂಬ ಭೂಪ್ರಮಾಣ; ಬಿತ್ತನೆ ಸಾಮರ್ಥ್ಯವನ್ನು ಆಧರಿಸಿದ ಖಂಡುಗ, ಕೊಳಗ, ಬಳ್ಳ, ವೆಲಿ, ಮುಂತಾದ ಭೂಪ್ರಮಾಣಗಳು ಅಸ್ತಿತ್ವದಲ್ಲಿದ್ದು ಪ್ರಾಕೃತಿಕ ಅಂಶಗಳ ಜೊತೆಗೆ ಅವುಗಳನ್ನು ಆಧರಿಸಿ ಭೂಕಂದಾಯವನ್ನು ನಿರ್ಧರಿಸಿ, ಷಡ್ಭಾಗ, ದಶಭಾಗ, ಕುಳಾಯ ಎಂಬ ಹೆಸರಲ್ಲಿ ಅದನ್ನು ಸಂಗ್ರಹಿಸಲಾಗುತ್ತಿತ್ತು. ಭೂಆಡಳಿತಕ್ಕೆ ಸಂಬಂಧಿಸಿದಂತೆ ಖಾಸಗಿ ಜಮೀನಿನ ಗಡಿಯನ್ನೂ ಗ್ರಾಮಗಡಿಯನ್ನೂ ನಿರ್ಧರಿಸಲು ಪ್ರಾಕೃತಿಕ ಅಂಶಗಳ ಜೊತೆಗೆ ಲಿಂಗಮುದ್ರೆ, ಮುಕ್ಕೊಡೆ, ವಾಮನಮುದ್ರೆ ಕಲ್ಲುಗಳನ್ನು ಗಡಿಕಲ್ಲಾಗಿ ನಿಲ್ಲಿಸಲಾಗುತ್ತಿದ್ದ ಅಂಶ ತಾಲೂಕಿನ ವಿವಿಧ ಶಾಸನಗಳಲ್ಲಿ ವ್ಯಕ್ತವಾಗಿದ್ದು, ಸುಂಕ, ತೆರೆ (ಮನೆದೆರೆ, ಹೊಸ್ತಿಲಪಣ) ಮಗ್ಗದೆರೆ, ಮಾರ್ಗಾದಾಯ, ಗಾಣದೆರೆ, ಸಾದದೆರೆ ಮುಂತಾದ ತೆರಿಗೆಗಳ ಪ್ರಸ್ತಾಪವೂ ಇದೆ. ಶಾಸನಗಳಲ್ಲಿ ಗದ್ದೆ, ಹೊಲ, ತೋಟ, ಮುಂತಾದ ಭೂವರ್ಗಗಳ ಉಲ್ಲೇಖವಿದೆ.

ವಿಜಯನಗರ ಹಾಗೂ ಮೈಸೂರರಸರ ಆಡಳಿತದಲ್ಲಿ ಕೃಷಿಕ್ಷೇತ್ರಕ್ಕೆ ಹೆಚ್ಚಿನ ಆಸ್ಥೆ ನೀಡಲಾಯಿತು. ಈ ಅವಧಿಯಲ್ಲಿ ಕೃಷಿ ಉತ್ಪನ್ನದ ೧/೬ ಭಾಗದಿಂದ ೧/೩ ಭಾಗವನ್ನೂ, ಕೆಲವೊಮ್ಮೆ ೧/೨ ಭಾಗವನ್ನೂ ಕಂದಾಯವಾಗಿ ಪಡೆಯಲಾಗುತ್ತಿತ್ತು. ಕಂದಾಯವನ್ನು ಧನ–ಧಾನ್ಯ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಕಂದಾಯ ಸೋರಿಕೆ, ರೈತ ಶೋಷಣೆ ಹಾಗೂ ಜಮೀನ್ದಾರರ ದಬ್ಬಾಳಿಕೆಯನ್ನು ನಿಯಂತ್ರಿಸಲು ತಾಲೂಕಿಗೆ ಇಬ್ಬರು ಹರಿಕಾರ (ಗೂಢಚಾರ)ರನ್ನು ಹೈದರನು ನೇಮಿಸಿದ್ದನು. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಭೂಕಂದಾಯ ವ್ಯವಸ್ಥೆಯು ಸಾಕಷ್ಟು ಸುಧಾರಿಸಲ್ಪಟ್ಟಿತು. ಪ್ರತಿ ತಾಲೂಕಿಗೂ ಅಮಲ್ದಾರರಿರುತ್ತಿದ್ದು, ಅವರ ನೆರವಿಗೆ ಮೂವರು ಸುಭೇದಾರರಿರುತ್ತಿದ್ದರು. ಹೋಬಳಿ ಮಟ್ಟದಲ್ಲಿ ಪಾರುಪತ್ಯೇದಾರರಿದ್ದು, ಅವರ ನೆರವಿಗೆ ಮಣೆಗಾರ ಹಾಗು ಗಡಿಶಾನುಭೋಗರು ಇರುತ್ತಿದ್ದರು. ಕಮೀಷನರುಗಳ ಆಡಳಿತಾವಧಿಯಲ್ಲಿ ಭೂಕಂದಾಯ ನಿಗಧಿಪಡಿಸಲು ಭೂಸರ್ವೇಕ್ಷಣ ಕಾರ್ಯದ ರೂಪು–ರೇಷೆಯನ್ನು ರಚಿಸಲಾಯಿತು. ಅದರಂತೆ ಬೌರಿಂಗ್ ಆಡಳಿತದಲ್ಲಿ (೧೮೬೨–೭೦) ಕೃಷಿ ಭೂಮಿಯನ್ನು ಮೊದಲ ಬಾರಿಗೆ ಅಳೆದು ಸರ್ವೇಕ್ಷಣ ಸಂಖ್ಯೆ ನೀಡುವ ಕಾರ್ಯ ಆರಂಭವಾಯಿತು. ಅನಂತರ ೧೮೭೭–೭೮ರಲ್ಲಿ ಸಂಸ್ಥಾನದಲ್ಲಿ ಭೂಸರ್ವೇಕ್ಷಣ ನಡೆಸಿ, ಫಲವತ್ತತೆ ಆಧಾರದ ಮೇಲೆ ಭೂಮಿಯನ್ನು ಆಣೆವಾರಿ ವರ್ಗೀಕರಿಸಿ, ಕಂದಾಯವನ್ನು ನಿಗದಿಪಡಿಸಲಾಯಿತು. ಮೊದಲ ಸರ್ವೇಕ್ಷಣದಲ್ಲಿ ಇಡೀ ತಾಲೂಕನ್ನೇ ಒಂದು ಘಟಕವನ್ನಾಗಿ ಪರಿಗಣಿಸಿ ಕಂದಾಯವನ್ನು ಸಾರಸಗಟಾಗಿ ನಿಗದಿಪಡಿಸಲಾಗಿತ್ತು. ಆದರೆ ನಂತರದಲ್ಲಿ ತಾಲೂಕನ್ನು ಪ್ರಾದೇಶಿಕ ಗುಂಪುಗಳಾಗಿ

ವರ್ಗೀಕರಿಸಿ, ವಿವಿಧ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಹಿಂದಿನ ೩೦ ವರ್ಷಗಳ ವಿವರವನ್ನು ಆಧರಿಸಿ ಕಂದಾಯವನ್ನು ನಿರ್ಧರಿಸಲಾಯಿತು. ಹಾಗೆ ನಿರ್ಧರಿಸಲ್ಪಟ್ಟ ಕಂದಾಯದರವು ಮುಂದಿನ ೩೦ ವರ್ಷ ಕಾಲ ಚಾಲ್ತಿಯಲ್ಲಿರುವಂತಾಯಿತು. ಆ ಪ್ರಕಾರ ಪಿರಿಯಾಪಟ್ಟಣ ತಾಲೂಕಿನ ಮೊದಲ ಕಂದಾಯ ನಿಗದಿ ಸರ್ವೇಕ್ಷಣವನ್ನು ೧೮೮೪ರಲ್ಲಿ ಕೈಗೊಳ್ಳಲಾಗಿತ್ತು. ದರವನ್ನು ೧೮೯೯ರಲ್ಲಿ ಜಾರಿಗೊಳಿಸಲಾಯಿತು. ಮೂವತ್ತು ವರ್ಷಗಳ ನಂತರ ಮೊದಲ ಕಂದಾಯ ನಿಗದಿ ಪರಿಷ್ಕರಣಾ ಸರ್ವೇಕ್ಷಣ ಕಾರ್ಯವನ್ನು ೧೯೨೪ರಲ್ಲಿ ಕೈಗೊಳ್ಳಲಾಯಿತು. ಆಗ ಇದು ವಲಯ XIII ರಲ್ಲಿತ್ತು.

ಏಕೀಕರಣದ ನಂತರ ಮತ್ತೆ ೧೯೬೪ರಲ್ಲಿ ಕಂದಾಯ ನಿಗದಿ ಪರಿಷ್ಕರಣಾ ಸರ್ವೇಕ್ಷಣ ಕಾರ್ಯವನ್ನು ಹಮ್ಮಿಕೊಳ್ಳಲಾಯಿತು. ಅದರಂತೆ ಪ್ರತಿಯೊಂದು ಜಮೀನನ್ನು ಕರಾರುವಕ್ಕಾಗಿ ಅಳೆದು, ಹವಾಗುಣ, ನೀರಾವರಿ ಮೂಲ, ಮಾರುಕಟ್ಟೆ ಸೌಲಭ್ಯ, ಸಾರಿಗೆ ಸೌಕರ್ಯ ಮುಂತಾದವನ್ನು ಪರಿಗಣಿಸಿ ಭೂಮಿಯನ್ನು ವರ್ಗೀಕರಿಸಿ ಪ್ರತಿ ವರ್ಗದ ಜಮೀನಿಗೂ ಸ್ಟ್ಯಾಂಡರ್ಡ್ ದರವನ್ನು ನಿಗದಿಪಡಿಸಲಾಯಿತು. ಅದರಂತೆ XIIIನೆಯ ವಲಯದಲ್ಲಿದ್ದ ಪಿರಿಯಾಪಟ್ಟಣ ತಾಲೂಕಿನ ಭೂಮಿಯನ್ನು ಒಂದು ಹಾಗೂ ಮೂರನೆಯ ದರ್ಜೆಗೆ ಸೇರಿದ್ದೆಂದು ಪರಿಗಣಿಸಿ ಒಂದನೇ ದರ್ಜೆ ಭೂಮಿಗೆ ಪ್ರತೀ ಎಕರೆ ಹೊಲಕ್ಕೆ ರೂ.೩.೯೫, ಗದ್ದೆಗೆ ಹಾಗೂ ತೋಟಕ್ಕೆ ರೂ.೧೫ ಕಂದಾಯವನ್ನೂ ಹಾಗೂ ಮೂರನೆಯ ದರ್ಜೆಯ ಭೂಮಿಗೆ ಕ್ರಮವಾಗಿ ರೂ.೨.೮೫, ರೂ.೧೨ ಹಾಗೂ ರೂ.೧೩ ಎಂದು ನಿಗದಿಪಡಿಸಲಾಯಿತು. ಆ ಸಂದರ್ಭದಲ್ಲಿ ತಾಲೂಕಿನಲ್ಲಿ ಒಟ್ಟು ೨೦೦ ಗ್ರಾಮಗಳಿದ್ದವು. ಪ್ರಮಾಣಿತ (ಸ್ಟ್ಯಾಂಡರ್ಡ್) ಕಂದಾಯ ದರವು, ಆಯಾ ವರ್ಗದ ಪ್ರತಿ ಎಕರೆ ಜಮೀನಿನ ಸರಾಸರಿ ಇಳುವರಿಯ ಒಟ್ಟು ಮೌಲ್ಯದ ಶೇಕಡ ನಾಲ್ಕರ ದರದಲ್ಲಿರುತ್ತಿತ್ತು. ಈ ಪರಿಷ್ಕೃತ ದರವು ಮುಂದಿನ ೩೦ ವರ್ಷಗಳ ಕಾಲ ಜಾರಿಯಲ್ಲಿರಬೇಕೆಂದು ತೀರ್ಮಾನಿಸಲಾಯಿತು.

**ನೀರಾವರಿ ಕರ :** ಸರ್ಕಾರಿ ಸ್ವಾಮ್ಯಕ್ಕೆ ಸೇರಿದ ಕೆರೆ, ಹೊಂಡ, ಕಾಲುವೆ, ಜಂಗಲ್, ಹಳ್ಳ, ಮುಂತಾದ ಜಲಮೂಲಗಳ ನೀರಾವರಿ ಸೌಕರ್ಯ ಹೊಂದಿರುವ ಜಮೀನಿಗೆ ವಿಧಿಸಿರುವ ಶುಲ್ಕವಿದಾಗಿದೆ. ಇದನ್ನು ಕೂಡ ಸರ್ವೇಕ್ಷಣ ಇಲಾಖೆಯೇ ನೀರಿನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪ್ರತೀ ವರ್ಷ ನಿಗದಿಪಡಿಸುತ್ತಿತ್ತು.

**ನಿರ್ವಹಣೆ ಕರ :** ಕರ್ನಾಟಕ ನೀರಾವರಿ ಕಾಯ್ದೆ (೧೯೬೫)ಯಂತೆ ಎಕರೆಗೆ ಪ್ರತಿವರ್ಷಕ್ಕೆ ರೂ. ನಾಲ್ಕು ನಿರ್ವಹಣಾಕರವನ್ನು ಆಕರಿಸಿ ವಸೂಲು ಮಾಡಲಾಗುತ್ತದೆ. ಆದರೆ ಸತತ ಎರಡು ವರ್ಷಕ್ಕಿಂತ ಹೆಚ್ಚು ಅವಧಿ ಜಮೀನಿಗೆ ನೀರು ಪೂರೈಕೆಯಾಗದಿದ್ದರೆ, ಇದರ ಆಕರಣೆ ಮಾಡುವಂತಿಲ್ಲ.

ಅಭಿವೃದ್ಧಿ ಶುಲ್ಕ ಹಾಗೂ ನೀರಾವರಿ ಕರಗಳನ್ನು ವಿಧಿಸುವಲ್ಲಿ ಏಕಪ್ರಕಾರದ ನೀರಾವರಿ ಕಾಯ್ದೆಯನ್ನು ೧೯೫೭ರಲ್ಲೂ ಮೈಸೂರು ನೀರಾವರಿ ನಿಯಮವನ್ನು

೧೯೬೫ರಲ್ಲೂ ಜಾರಿಗೊಳಿಸಲಾಯಿತು. ಮೊದಲು ಮಳೆ ಆಶ್ರಿತ ಗದ್ದೆಗೂ ನೀರಾವರಿ ಶುಲ್ಕ ವಿಧಿಸಲಾಗುತ್ತಿದ್ದು, ಸರ್ಕಾರಿ ಸ್ವಾಮ್ಯದ ಜಲಮೂಲವನ್ನು ಬೇಸಾಯಕ್ಕೆ ಬಳಸಿಕೊಂಡರೆ ಅದನ್ನು ಶೇ. ೩೨.೫ಕ್ಕೆ ಹೆಚ್ಚಿಸಲಾಗುತ್ತಿತ್ತು. ಆದರೆ ೧೯೮೦ರಲ್ಲಿ ಈ ಪದ್ಧತಿಯನ್ನು ರದ್ದುಪಡಿಸಲಾಯಿತು. ಮುಂದೆ ೧೯೮೫ರ ನೀರಾವರಿ ಕಾಯ್ದೆಯಂತೆ ಜಿಲ್ಲೆಯಲ್ಲಿ (ಪ್ರತಿ ಎಕರೆಗೆ) ೧೨ ತಿಂಗಳ ಕಬ್ಬಿನ ಬೆಳೆಗೆ ರೂ.೧೫೦, ೧೩-೧೮ ತಿಂಗಳ ಕಬ್ಬಿನ ಬೆಳೆಗೆ ರೂ.೨೨೫, ಬತ್ತದ ಮೊದಲ ಬೆಳೆಗೆ ರೂ.೩೫, ನಂತರದ ಪ್ರತಿಬೆಳೆಗೆ ರೂ.೪೦, ಗೋಧಿಗೆ ರೂ.೨೨, ಜೋಳಕ್ಕೆ ರೂ.೨೦, ಶೇಂಗಾ ರೂ.೨೪, ಹತ್ತಿಗೆ ರೂ.೪೦ ಮುಸುಕಿನ ಜೋಳ, ರಾಗಿ, ನವಣೆ, ಸಜ್ಜೆ, ಹುರುಳಿ, ಈರುಳ್ಳಿ, ಆಲೂಗಡ್ಡೆ, ಕೊತ್ತಂಬರಿ ಮುಂತಾದವಕ್ಕೆ ರೂ.೨೦, ಕಾಳುಗಳಿಗೆ ರೂ.೧೫, ಗೊಬ್ಬರ ಬೆಳೆಗಳಿಗೆ ರೂ.೮ ಹಾಗೂ ತೋಟಗಾರಿಕೆ ಬೆಳೆಗೆ ರೂ.೪೦ ನೀರಾವರಿ ಶುಲ್ಕವನ್ನು ನಿಗದಿಪಡಿಸಲಾಗಿತ್ತು. ಇದು ತಾಲೂಕಿಗೂ ಅನ್ವಯಿಸುತ್ತಿತ್ತು.

**ನೀರಿನ ದಂಡ :** ನೀರಾವರಿ ಇಲಾಖೆಯಿಂದ ಪರವಾನಗಿ ಪಡೆಯದೆ ನೀರನ್ನು ಬಳಸಿಕೊಂಡರೆ ಸಾಮಾನ್ಯ ನೀರಿನ ದರದ ೧೫ ಪಟ್ಟು ಹಾಗೂ ಅಧಿಸೂಚಿತ ಬೆಳೆಗಳಿಗೆ ಬದಲು ಬೇರೆ ಬೆಳೆ ಬೆಳೆದರೆ, ಸಾಮಾನ್ಯ ದರದ ೧೦ ಪಟ್ಟು ಹೆಚ್ಚು ದಂಡ ವಿಧಿಸಲಾಗುತ್ತದೆ.

ಸರ್ವೇಕ್ಷಣ ಇಲಾಖೆಯು ಸಿದ್ಧಪಡಿಸಿದ ಪಹಾನಿಸೂಡ್ ಹಾಗೂ ಆಕರಬಂದಿ ದಫ್ತರುಗಳ ನೆರವಿನೊಂದಿಗೆ ಗ್ರಾಮಲೆಕ್ಕಿಗರು ಖೇತ್‌ವಾರು ದಾಖಲೆಯನ್ನು ರಚಿಸಿಕೊಳ್ಳುತ್ತಾರೆ. ಇದನ್ನಾಧರಿಸಿ ಗ್ರಾಮದ ಜಮೀನಿನ ವಾಸ್ತವಿಕ ಪರಿಸ್ಥಿತಿಯನ್ನು ದಾಖಲಿಸುತ್ತಾರೆ. ಇದು ಜಮೀನಿನ ಒಡೆತನ, ಗೇಣಿ, ಆಕರ ಹಾಗೂ ಬೆಳೆಗಳ ಬಗ್ಗೆ ಮಾಹಿತಿಯನ್ನು ಹೊಂದಿರುವ ಪ್ರಮುಖ ಕಂದಾಯ ದಾಖಲೆಯಾಗಿದೆ. ಭೂಒಡೆತನಕ್ಕೆ ಸಂಬಂಧಿಸಿದ ಎಲ್ಲಾ ಮಾರ್ಪಾಡುಗಳನ್ನು ಇದರಲ್ಲಿ ದಾಖಲಿಸಲಾಗುತ್ತದೆ. ಈ ಮೂಲ ದಾಖಲೆಗಳನ್ನು ತಾಲೂಕು ಕಚೇರಿಯಲ್ಲಿ ಸಂರಕ್ಷಿಸಿಡಲಾಗುತ್ತಿದ್ದು, ಐದು ವರ್ಷಗಳಿಗೊಮ್ಮೆ ಈ ದಾಖಲೆಯನ್ನು ನವೀಕರಿಸಲಾಗುತ್ತದೆ. ಖಾತ ದಫ್ತರ್ ಇನ್ನೊಂದು ಮಹತ್ವದ ದಾಖಲೆಯಾಗಿದ್ದು, ಪ್ರತೀ ವರ್ಷ ಜುಲೈ ಒಂದರಂದು ತೆರೆಯಲಾಗುವ ಇದರಲ್ಲಿ ಅರ್.ಟಿ.ಸಿ. ಖಿರ್ದಿ (ದಿನವಹಿಕಡತ) ರಸೀತಿ ಪುಸ್ತಕ, ಭೂಕಂದಾಯಕ್ಕೆ ಸಂಬಂಧಿಸಿದಂತೆ ಖಾತದಾರನ ಬಾಕಿ ವಿವರ, ಪರಿವರ್ತನಾ ಶುಲ್ಕ ಹಾಗೂ ಇತರೆ ದಂಡ ಇತ್ಯಾದಿ ಮಾಹಿತಿ ಇರುತ್ತದೆ. ಈ ದಫ್ತರನ್ನು ಜೂನ್ ೩೦ರಂದು ಮುಕ್ತಾಯಗೊಳಿಸಿ ಗ್ರಾಮಗಳ ವಾರ್ಷಿಕ ಲೆಕ್ಕಪತ್ರವನ್ನು ಅಂತಿಮಗೊಳಿಸಲಾಗುತ್ತದೆ. ಆಯಾ ರೈತರ ಬಳಿ, ಅವರವರ ಜಮೀನಿಗೆ ಸಂಬಂಧಿಸಿದಂತೆ, ಇರುವ ಪಟ್ಟ ಅಥವಾ ರೈತರ ರಸೀತಿ ಪುಸ್ತಕದಲ್ಲಿ, ರೈತನು ಪಾವತಿಸಿದ ಕಂದಾಯ ಹಾಗೂ ಬಾಕಿ ವಿವರಗಳಿರುತ್ತವೆ. ಗ್ರಾಮಲೆಕ್ಕಿಗನು ನೋಂದಣಿಗೊಂಡ ಎಲ್ಲಾ ಭೂವ್ಯವಹಾರಗಳನ್ನು ಅಯಾ ರೈತರ ಪಟ್ಟದಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಅಲ್ಲದೆ ರೈತನು ಸರ್ಕಾರದಿಂದ ಪಡೆಯುವ ಸಾಲ, ಕೊಡಬೇಕಾದ ಬಾಕಿ, ಅಡಮಾನ ವಿವರಗಳನ್ನೂ ಇದರಲ್ಲಿ ದಾಖಲಿಸಲಾಗುತ್ತದೆ. ಇದನ್ನು ಕಂದಾಯ

ದಾಖಲೆ ಶಿರಸ್ತೆದಾರರು ಪರಿಶೀಲಿಸಿ ದೃಢೀಕರಿಸುತ್ತಾರೆ. ಸಹಾಯಕ ಆಯುಕ್ತರು ಹಾಗೂ ತಹಶೀಲ್ದಾರರು ತಪಾಸಣೆ ಪ್ರವಾಸ ಸಂದರ್ಭದಲ್ಲಿ ಇವನ್ನು ರೈತನ ಮೌಖಿಕ ವಿವರಣೆಯೊಂದಿಗೆ ತಾಳೆ ಮಾಡುವ ಮೂಲಕ ಪರಿಶೀಲಿಸುತ್ತಾರೆ.

**ವಾರ್ಷಿಕ ಲೆಕ್ಕಾಚಾರ (ದಿಲ್ವಾರು) :** ಪ್ರತೀ ವರ್ಷ ಜೂನ್ ಅಂತ್ಯಕ್ಕೆ ಪ್ರತಿ ಗ್ರಾಮದ ವಾರ್ಷಿಕ ಲೆಕ್ಕಪತ್ರವನ್ನು ಸಿದ್ಧಪಡಿಸಿ, ತಾಲೂಕು ಕಚೇರಿಯ ದಫ್ತರಿನೊಂದಿಗೆ ತಾಳೆ ಮಾಡಿ ಪರಿಶೀಲಿಸಿ ಗ್ರಾಮಗಳಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಹಾಗೂ ವಾಸ್ತವಿಕ ಕಂದಾಯ ಸಂಗ್ರಹ ವಿವರಗಳನ್ನು ಖಚಿತಪಡಿಸಿಕೊಳ್ಳಲಾಗುತ್ತದೆ.

**ಜಮಾಬಂದಿ :** ಇದು ಪ್ರತೀ ಗ್ರಾಮದ ಕಂದಾಯ ಆಡಳಿತವನ್ನು ಪರಿಶೀಲಿಸುವ ಉದ್ದೇಶವನ್ನು ಹೊಂದಿರುವ ವಾರ್ಷಿಕ ಜಮಾಬಂದಿ ಪದ್ಧತಿ. ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಹಿಂದೆ ಇದನ್ನು ದಸರಾ ರಜೆಯ ನಂತರ ಆರಂಭಿಸಲಾಗುತ್ತಿದ್ದು, ಜಮಾಬಂದಿ ಕಾರ್ಯದ ರೂಪು ರೇಷೆಯನ್ನು ಜಿಲ್ಲಾಧಿಕಾರಿಗಳು ಅಂತಿಮಗೊಳಿಸುತ್ತಿದ್ದು, ಇದು ಜಮೀನಿನ ಗಡಿ, ಸಾಲುಮರಗಳ ಪ್ರಗತಿ ಹಾಗೂ ಇತರ ನೀರಾವರಿ ಕಾರ್ಯಗಳ ಪರಿಶೀಲನೆಯನ್ನು ಹೊಂದಿರುತ್ತಿತ್ತು. ಆದರೆ ಕ್ರಮೇಣ ಗ್ರಾಮಲೆಕ್ಕಿಗರ ಲೆಕ್ಕಪತ್ರ ಪರಿಶೀಲನೆ, ತಕರಾರು ತಃಖ್ತೆ ಹಾಗೂ ದರಖಾಸ್ತುಗಳನ್ನು ಬಗೆಹರಿಸುವುದು, ಪಟ್ಟಾಗಳ ವರ್ಗಾವಣೆಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಬಗೆಹರಿಸುವುದು, ಸರ್ಕಾರ ವಿವಿಧ ಕಂದಾಯಗಳ ಆಕರ, ಸ್ವೀಕಾರ ಹಾಗೂ ಬಾಕಿ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸುವುದೇ ಮುಂತಾದವೂ ಸೇರಲ್ಪಟ್ಟವು. ಅಲ್ಲದೇ ಸರ್ಕಾರಿ ಭೂಮಿಯ ಒತ್ತುವರಿ, ಗ್ರಾಮದ ಸಾಗುವಳಿ ಸ್ಥಿತಿಗತಿಗಳನ್ನು ಪರಿಶೀಲಿಸುವುದೂ ಜಮಾಬಂದಿ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

ದಿತ್ತಂ ಜಮಾಬಂದಿ ಹಾಗೂ ಹುಜೂರು ಜಮಾಬಂದಿ, ಜಮಾಬಂದಿಯ ಎರಡು ವಿಧಗಳಾಗಿದ್ದು, ದಿತ್ತಂ ಜಮಾಬಂದಿಯನ್ನು ಆಯಾ ತಾಲೂಕಿನ ತಹಶೀಲ್ದಾರರು ನಡೆಸುತ್ತಾರೆ. ಇದನ್ನು ಡಿಸೆಂಬರ್ ತಿಂಗಳ ಅಂತ್ಯದ ವೇಳೆಗೆ ಹುಜೂರು ಜಮಾಬಂದಿಗೆ ಪೂರ್ವಭಾವಿಯಾಗಿ ಒಂದು ತಿಂಗಳು ಮೊದಲೇ ಮುಗಿಸಬೇಕಾಗುತ್ತದೆ. ಈ ಜಮಾಬಂದಿಯಲ್ಲಿ ಹಿಂದಿನ ಕಂದಾಯ ಸಾಲಿನ ಲೆಕ್ಕವನ್ನು ಮುಕ್ತಾಯಗೊಳಿಸಿ, ಪ್ರಸ್ತುತ ಸಾಲಿನ ಕಂದಾಯ ಲೆಕ್ಕವನ್ನು ಸಿದ್ಧಪಡಿಸಲಾಗುತ್ತದೆ. ಆ ಸಂದರ್ಭದಲ್ಲಿ ಹಿಂದಿನ ಸಾಲಿನ ಒಂಭತ್ತು ಪ್ರಕಾರದ ದಾಖಲೆಗಳನ್ನು ಹಾಗೂ ಪ್ರಸ್ತುತ ಸಾಲಿಗಾಗಿ ೧೩ ವಿವಿಧ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ.

ಜಿಲ್ಲಾಧಿಕಾರಿ ಅಥವಾ ಉಪವಿಭಾಗಾಧಿಕಾರಿಗಳು ಅಕ್ಟೋಬರ್–ಡಿಸೆಂಬರ್ ತಿಂಗಳಲ್ಲಿ ನಡೆಸುವ ವಾರ್ಷಿಕ ಲೆಕ್ಕಪತ್ರ ತಪಾಸಣೆಯೇ ಹುಜೂರು ಜಮಾಬಂದಿ ಆಗಿದ್ದು, ಆ ಸಂದರ್ಭದಲ್ಲಿ ಹಿಂದಿನ ವರ್ಷದ ಗ್ರಾಮಲೆಕ್ಕಪತ್ರಗಳ ತಪಾಸಣೆ ಹಾಗೂ ದೃಢೀಕರಣ ಮಾಡುವುದರ ಜೊತೆಗೆ, ಚಾಲ್ತಿ ವರ್ಷದ ಕಂದಾಯ ಹಾಗೂ ಇತರ ಬಾಕಿಗಳ ಬಗ್ಗೆ ನಿರ್ಧರಿಸಲಾಗುತ್ತದೆ. ಜಮಾಬಂದಿ ಅಧಿಕಾರಿಯು ಗ್ರಾಮ ಅಥವಾ ವಲಯಕ್ಕೆ ಭೇಟಿ ನೀಡಿದಾಗ ರೈತರ ಅಹವಾಲುಗಳನ್ನು ಆಲಿಸಿ, ಪರಿಹರಿಸಲು

ಅನುಕೂಲವಾಗುವಂತೆ ಜಮಾಬಂದಿ ದಿನಾಂಕವನ್ನು ಪೂರ್ವಭಾವಿಯಾಗಿ ತಿಳಿಸಲಾಗುತ್ತದೆ. ಜಮಾಬಂದಿಯಾದ ೧೫ ದಿನದೊಳಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ.

**ಭೂಕಂದಾಯ ವಸೂಲಿ :** ಅನಾದಿಕಾಲದಿಂದಲೂ ಕಂದಾಯ ಪಾವತಿಸುವುದು ರೈತಾಪಿ ಜನರ ಋಣಭಾರವಾಗಿತ್ತು. ಆರಂಭದಲ್ಲಿ ಧಾನ್ಯರೂಪದಲ್ಲೂ, ನಾಣ್ಯಪದ್ಧತಿ ಚಲಾವಣೆಗೆ ಬಂದ ನಂತರ ಧನರೂಪದಲ್ಲೂ ಕಂದಾಯ ಸಂಗ್ರಹಿಸಲಾಗುತ್ತಿದ್ದು, ಕೆಲವೊಮ್ಮೆ ಧನ–ಧಾನ್ಯ ರೂಪಗಳೆರಡರಲ್ಲೂ ಸಂಗ್ರಹಿಸಲಾಗುತ್ತಿತ್ತು. ಕಾಲದಿಂದ ಕಾಲಕ್ಕೆ ಕಂದಾಯ ಪ್ರಮಾಣದಲ್ಲಿ ವ್ಯತ್ಯಾಸವಿದ್ದು, ಉತ್ಪನ್ನದ ೧/೬ ಭಾಗದಿಂದ ೧/೨ ಭಾಗವನ್ನು ತೆರಿಗೆಯಾಗಿ ಸಂಗ್ರಹಿಸುತ್ತಿದ್ದುದಕ್ಕೆ ಶಾಸನಾಧಾರಗಳಿವೆ. ಹಿಂದೆ ಫೆಬ್ರವರಿಯಿಂದ ಮೇ ತಿಂಗಳವರೆಗೆ ನಾಲ್ಕು ಕಂತುಗಳಲ್ಲಿ ಭೂಕಂದಾಯ ಸಲ್ಲಿಸಲು ಅವಕಾಶವಿತ್ತು. ಆದರೆ ೧೯೬೪ರ ಕರ್ನಾಟಕ ಭೂಕಂದಾಯ ಅಧಿನಿಯಮದನ್ವಯ ಭೂಕಂದಾಯ ಹಾಗೂ ಇತರೆ ಬಾಕಿ ವಸೂಲಿಯನ್ನು ಜನವರಿಯಿಂದ ಜೂನ್‌ವರೆಗೆ ಮಾಡಲಾಗುತ್ತದೆ. ಭೂಕಂದಾಯವನ್ನು ನಾಲ್ಕು ಸಮಾನ ಕಂತುಗಳಲ್ಲಿ ಜನವರಿಯಿಂದ ಏಪ್ರಿಲ್ ತಿಂಗಳವರೆಗೆ ಆಯಾ ತಿಂಗಳ ೨೦ನೆಯ ತಾಲೂಕಿನೊಳಗೆ ಪಾವತಿಸಬೇಕಾಗಿದ್ದು, ಐದು ರೂ.ಗಿಂತ ಕಡಿಮೆ ಕಂದಾಯವಿದ್ದಲ್ಲಿ ಜನವರಿ ತಿಂಗಳಲ್ಲೇ ಪೂರ್ಣ ಪಾವತಿಸಬಹುದಾಗಿದೆ.

**ಕಂದಾಯ ಮಾಫಿ :** ಪ್ರಾಚೀನ ಕಾಲದಲ್ಲೂ ಅತಿವೃಷ್ಟಿ–ಅನಾವೃಷ್ಟಿಗಳಿಂದಾಗಿ ಕ್ಷಾಮ ಡಾಮರಗಳು ಬಂದ ಸಂದರ್ಭದಲ್ಲಿ ಕಂದಾಯ ಮನ್ನಾ ಮಾಡುವ ಸಂಪ್ರದಾಯವಿತ್ತು. ಆದರೆ ಅದನ್ನು ಸಮರ್ಥಿಸುವ ಶಾಸನಾಧಾರಗಳು ವಿರಳವಾಗಿದ್ದರೂ, ಕೌಟಿಲ್ಯನ ಅರ್ಥಶಾಸ್ತ್ರವೂ ಸೇರಿದಂತೆ ಅನೇಕ ಧರ್ಮಗ್ರಂಥಗಳಲ್ಲಿ ಈ ಬಗ್ಗೆ ಪ್ರಸ್ತಾಪವಿದೆ. ಆದರೂ ೧೯೨೨ರವರೆಗೆ ಸಂಸ್ಥಾನದಲ್ಲಿ ಕಂದಾಯ ಮನ್ನಾಕ್ಕೆ ಸಂಬಂಧಿಸಿದಂತೆ, ಯಾವುದೇ ನಿರ್ದಿಷ್ಟ ಕಾಯ್ದೆಗಳಿರಲಿಲ್ಲ. ಆದರೆ ೧೯೨೨ರ ಕಾಯ್ದೆಯು ನೀರಾವರಿ ಜಮೀನುಗಳಿಗಷ್ಟೆ ಕಂದಾಯ ಮಾಫಿ ಸೌಕರ್ಯವನ್ನು ಕಲ್ಪಿಸಿದ್ದು, ರದ್ದು ಮಾಡಿದ್ದ ಕಂದಾಯವನ್ನು ಮರುವರ್ಷ ಪಾವತಿಸಬೇಕಾಗಿತ್ತು. ೧೯೬೬ರ ಭೂಕಂದಾಯ ಕಾಯ್ದೆಯನ್ವಯ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರರು ಅಂತಹ ಪ್ರದೇಶಗಳಲ್ಲಿ ಪ್ರಯೋಗಾರ್ಥವಾಗಿ ಕೆಲವೆಡೆ ಬೆಳೆಯನ್ನು ಕಟಾವು ಮಾಡಿ, ಇಳುವರಿ ಆಧಾರದ ಮೇಲೆ ಆದ ನಷ್ಟವನ್ನು ಪರಿಗಣಿಸಿ, ಕಂದಾಯ ಮನ್ನಾ ನೀತಿಯನ್ನು ನಿರ್ಧರಿಸುತ್ತಿದ್ದರು. ಆಗ ಜಮೀನಿನ ಬೆಳೆವಾರು ಸರಾಸರಿ ಇಳುವರಿಯು ಎಕರೆಗೆ ಶೇ. ೩೫ ಕ್ಕಿಂತ ಕಡಿಮೆ ಇದ್ದರೆ ಪೂರ್ಣಕಂದಾಯ ರದ್ದತಿ ಮಾಡುತ್ತಿದ್ದು, ಶೇ. ೩೭–೫೦ ಇಳುವರಿಯಾದಲ್ಲಿ ಕಂದಾಯ ರದ್ದತಿಗೆ ಅವಕಾಶವಿರಲಿಲ್ಲ. ಇದು ತಾತ್ಕಾಲಿಕ ರದ್ಧತಿಯಾಗಿದ್ದು, ಮರುವರ್ಷ ಚಾಲ್ತಿ ಕಂದಾಯದೊಂದಿಗೆ ಹಿಂದಿನ ವರ್ಷದ್ದನ್ನೂ ಸಂಗ್ರಹಿಸಲಾಗುತ್ತಿತ್ತು. ಕೆಲವೊಮ್ಮೆ ವಾರ್ಷಿಕ ಬರಗಾಲಕ್ಕೆ ತುತ್ತಾದ ಪ್ರದೇಶಗಳಿಗೆ ಮೂರು ವರ್ಷ ಅವಧಿ ಕಂದಾಯ ಮಾಫಿ ನೀಡುವ ಅಧಿಕಾರವಿತ್ತು. ಆದರೆ ಅವನ್ನು ನಾಲ್ಕನೆಯ ವರ್ಷದಲ್ಲಾದರೂ ಬೆಳೆ ಆಧಾರದ ಮೇಲೆ ಪಾವತಿಸಬೇಕಿತ್ತು. ರಾಜ್ಯ ಸರ್ಕಾರದ

೧೯೭೭ರ ಕಾಯ್ದೆಯಂತೆ ಎರಡು ಹೆಕ್ಟೇರು ಮಳೆಯಾಶ್ರಿತ ಜಮೀನನ್ನು ಹೊಂದಿರುವ ಸಣ್ಣ ಹಿಡುವಳಿದಾರರಿಗೆ ಕಂದಾಯ ಮಾಫಿ ನೀಡಲು ಅವಕಾಶವಿದ್ದರೂ ಒಂದು ರೂಪಾಯನ್ನು ಕಂದಾಯ ದಾಖಲೆ ನಿರ್ವಹಣೆಗಾಗಿ ಸಂಗ್ರಹಿಸಲಾಗುತ್ತಿತ್ತು. ಮುಂದೆ ೧೯೮೦ರಲ್ಲಿ ಈ ಸವಲತ್ತನ್ನು ನಾಲ್ಕು ಎಕರೆವರೆಗಿನ ಮಳೆಯಾಶ್ರಿತ ಇಲ್ಲವೇ ನೀರಾವರಿಯಾಶ್ರಿತ ಜಮೀನುಗಳಿಗೂ ವಿಸ್ತರಿಸಲಾಯಿತು. ನಿಯಮದಂತೆ ನಾನಾಕಾರಣಗಳಿಂದ ತಾಲೂಕಿನಲ್ಲಿ ಕ್ಷಾಮಡಾಮರಗಳು ಎದುರಾದ ಸಂದರ್ಭದಲ್ಲಿ ಕಂದಾಯ ಮಾಫಿ ನೀಡಲಾಗುತ್ತದೆ.

**ಇನಾಂಭೂಮಿ :** ಪ್ರಾಚೀನ ಕಾಲದಲ್ಲಿ ಧಾರ್ಮಿಕ ಕಾರಣಗಳಿಗಾಗಿ ದೇವಾಲಯ, ಧಾರ್ಮಿಕ ಸಂಸ್ಥೆಗಳಿಗೆ, ಯೋಧರಿಗೆ, ವಿವಿಧ ವ್ಯಕ್ತಿಗಳಿಗೆ ಭೂಮಿಯನ್ನು ಉಂಬಳಿಯಾಗಿ ನೀಡಲಾಗುತ್ತಿತ್ತು. ಆದರೆ ೧೮ನೆಯ ಶತಮಾನದಿಂದೀಚೆಗೆ ಜಮೀನನ್ನು ಇನಾಂ ನೀಡುವ ಪದ್ಧತಿ ಇಳಿಮುಖಗೊಂಡಿತು. ೧೯ನೆಯ ಶತಮಾನದಲ್ಲಿ ಧರ್ಮಛತ್ರ, ತೋಪು, ಕೆರೆ, ಸಾಲುಮರ, ಮುಂತಾಗಿ ಸಮಾಜಕಲ್ಯಾಣ ಕಾರ್ಯಗಳಿಗೆ ಮಾತ್ರ ಇದು ಸೀಮಿತವಾಗಿತ್ತು. ಆದರೂ ಸರ್ವಮಾನ್ಯ, ಜೋಡಿ ಹಾಗೂ ಕಾಯಂಗುತ್ತ ಗ್ರಾಮಗಳು ಚಾಲ್ತಿಯಲ್ಲಿದ್ದವು. ಈ ಸಂಬಂಧ ೧೮೬೬ರಲ್ಲಿ ಇನಾಂ ಆಯೋಗವನ್ನು ರಚಿಸಲಾಗಿತ್ತು. ೧೮೮೬–೧೯೩೨ರ ಅವಧಿಯಲ್ಲಿ ಅನೇಕ ಇನಾಂ ಆಯೋಗಗಳು ರಚಿಸಲ್ಪಟ್ಟಿದ್ದು, ಇನಾಂ ಗ್ರಾಮಗಳ ರದ್ಧತಿಗಾಗಿ ಒತ್ತಾಯವಿತ್ತು. ಈ ಸಂಬಂಧ ೧೯೪೮ರಲ್ಲಿ ರಚಿಸಲ್ಪಟ್ಟಿದ್ದ ಸಮಿತಿಯು ನೀಡಿದ ಶಿಫಾರಸ್ಸಿನಂತೆ ೧೯೫೫ರಲ್ಲಿ ಮೈಸೂರು ಇನಾಂ ರದ್ಧತಿ ಕಾಯ್ದೆ ಹಾಗೂ ಮೈಸೂರು ಧಾರ್ಮಿಕ ದತ್ತಿ ರದ್ಧತಿ ಕಾಯ್ದೆಗಳು ಜಾರಿಗೆ ಬಂದವು. ಅದರಂತೆ ಆಗ ತಾಲೂಕಿನಲ್ಲಿದ್ದ ಜೋಡಿಗ್ರಾಮ ಹಾಗೂ ಇನಾಂ ಭೂಮಿಗಳೂ ರದ್ದಾದವು. ಆದರೆ, ಧಾರ್ಮಿಕ ಸಂಸ್ಥೆಗಳಿಗೆ ಇನಾಂಗೆ ಬದಲು ತಸ್ತಿಕ್ ಭತ್ಯೆಯನ್ನು ನಿಗದಿಪಡಿಸಿ ನೀಡಲು ಸರ್ಕಾರ ಕ್ರಮ ತೆಗೆದುಕೊಂಡಿತು. ಈ ಭತ್ಯೆಯನ್ನು ಆ ಸಂಸ್ಥೆಯು ಅಸ್ತಿತ್ವದಲ್ಲಿರುವವರೆಗೆ ವರ್ಷಂಪ್ರತಿ ನೀಡಲಾಗುತ್ತದೆ. ಇದು ಸಾಮಾನ್ಯವಾಗಿ ಸಂಸ್ಥೆಯ ಐದು ವರ್ಷದ ಆದಾಯಕ್ಕೆ ಸಮನಾಗಿದ್ದು, ಮೊತ್ತವನ್ನು ಜಿಲ್ಲಾಧಿಕಾರಿ ನಿರ್ಧರಿಸುತ್ತಾರೆ. ಇದೇ ರೀತಿ ೧೯೬೧ರ ಕರ್ನಾಟಕ ಭೂಸುಧಾರಣಾ ಕಾಯ್ದೆಯನ್ವಯ ಇನಾಂ ಜಮೀನು ಕಳೆದುಕೊಂಡ ಸಂಸ್ಥೆಗಳಿಗೂ ತಸ್ತಿಕ್ ಭತ್ಯೆಯನ್ನು ನೀಡಲಾಗುತ್ತಿದ್ದು, ಅದರ ವಾರ್ಷಿಕ ಮಂಜೂರಾತಿಯನ್ನೂ ಜಿಲ್ಲಾಧಿಕಾರಿಗಳೇ ನೀಡುತ್ತಾರೆ.

**ಭೂಸುಧಾರಣೆ :** ಗೇಣಿದಾರಿ ಸಮಸ್ಯೆಯನ್ನು ಬಗೆಹರಿಸಲು ೧೯೫೭ರಲ್ಲಿ ಬಿ.ಡಿ. ಜತ್ತಿ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಗೇಣಿದಾರಿ ಹಾಗೂ ಕೃಷಿಭೂಮಿ ಕಾನೂನು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿ ನೀಡಿದ ಶಿಫಾರಸ್ಸನ್ನು ಆಧರಿಸಿದ ಕಾಯ್ದೆಗೆ ೧೯೬೨ರಲ್ಲಿ ರಾಷ್ಟ್ರಪತಿಗಳ ಸಮ್ಮತಿ ಲಭಿಸಿ ಅದು ೧೯೬೫ರ ಅಕ್ಟೋಬರ್‌ನಲ್ಲಿ ರಾಜ್ಯದಲ್ಲಿ ಜಾರಿಗೆ ಬಂದಿತು. ಇದು ಮೇಲಿಂದ ಮೇಲೆ ೧೯೭೪ರವರೆಗೆ ಆರು ಬಾರಿ ತಿದ್ದುಪಡಿ ಕಂಡಿತು. ಅಂತಿಮ ತಿದ್ದುಪಡಿ (೧೯೭೪) ಪ್ರಕಾರ 'ಉಳುವವನಿಗೆ ಭೂಮಿ' ಎಂಬುದೇ

ಘೋಷಣಾ ಮಂತ್ರವಾಯಿತು. ಅದರಂತೆ ಕೃಷಿ ಕಾರ್ಮಿಕರು, ಭೂರಹಿತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು, ಭೂಒಡೆಯರಾಗಲು ಸಾಧ್ಯವಾಯಿತು. ಈ ಕಾಯ್ದೆಯ ಪ್ರಕಾರ ಕುಟುಂಬವು ಗಂಡ–ಹೆಂಡತಿ, ಅವರ ಅಪ್ರಾಪ್ತ ವಯಸ್ಸಿನ ಗಂಡು ಹಾಗೂ ಅವಿವಾಹಿತ ಹೆಣ್ಣುಮಕ್ಕಳುಗಳನ್ನು ಒಳಗೊಂಡಿದ್ದು, ಪ್ರತೀ ಕುಟುಂಬವು ಹೊಂದಿರಬಹುದಾದ ಜಮೀನಿನ ಗರಿಷ್ಟ ಮಿತಿಯನ್ನು ಕಡಿಮೆ ಮಾಡಲಾಯಿತು. ಅಲ್ಲದೇ ಕೃಷಿಯೇತರ ಮೂಲಗಳಿಂದ ವಾರ್ಷಿಕ ರೂ. ೧೨,೦೦೦ಕ್ಕಿಂತ ಹೆಚ್ಚು ವರಮಾನವನ್ನು ಪಡೆಯುವವರು ನಿಶ್ಚಿತ ಕರಾರುಗಳ ಹೊರತಾಗಿ, ಭವಿಷ್ಯದಲ್ಲಿ ಕೃಷಿ ಜಮೀನು ಖರೀದಿಸುವುದನ್ನು ಈ ಶಾಸನ ನಿಷೇಧಿಸಿತು. ಈ ಕಾಯ್ದೆಯನ್ವಯ ಸೈನಿಕರು ಹಾಗೂ ನಾವಿಕರ ಹೊಲಗಳನ್ನು ಹೊರತುಪಡಿಸಿ ಉಳಿದಂತೆ ಇದ್ದ ಗೇಣಿದಾರಿ ಪದ್ಧತಿ ರದ್ದಾಗಿ ಭೂಮಾಲೀಕ–ಗೇಣಿದಾರ ಸಂಬಂಧ ಅಂತ್ಯವಾಯಿತು. ಸ್ವಂತ ಉಳುಮೆ ಮಾಡುವವರಿಗೆ ಮಾತ್ರ ಭೂಒಡೆತನದ ಹಕ್ಕನ್ನು ಈ ಕಾಯ್ದೆ ನೀಡುತ್ತದೆ. ಅದರಂತೆ ಕುಟುಂಬದ ಸದಸ್ಯರ ನೆರವಿನೊಂದಿಗೆ ಸ್ವಂತ ಉಳುಮೆ ಇಲ್ಲವೇ ಕೂಲಿಯಾಳುಗಳಿಗೆ ನಗದು ಕೂಲಿ ನೀಡಿ ಉಳಿಮೆ ಮಾಡಿಸಬಹುದೇ ಹೊರತು ಧಾನ್ಯರೂಪದಲ್ಲಲ್ಲ. ಈ ಕಾಯ್ದೆಯನ್ವಯ ತಾಲೂಕು ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಲ್ವರು ಸರ್ಕಾರೇತರ ಸದಸ್ಯರನ್ನೊಳಗೊಂಡ ಭೂನ್ಯಾಯಮಂಡಳಿಯನ್ನು ಸ್ಥಾಪಿಸಲಾಯಿತು. ಭೂಸುಧಾರಣೆ ಕಾಯ್ದೆಯಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲೆಂದೇ ಇದನ್ನು ರಚಿಸಲಾಗಿದ್ದು, ದುರ್ಬಲ ಗೇಣಿದಾರರ ನೆರವಿಗೆಂದು ಸರ್ಕಾರವು ಕಾನೂನು ಸಲಹಾ ಕೋಶ (ಸೆಲ್)ವನ್ನು ಸಚಿವಾಲಯದಲ್ಲಿ ಸ್ಥಾಪಿಸಿದ್ದು, ಅನ್ಯಾಯಕ್ಕೊಳಗಾದ ಗೇಣಿದಾರರು ರಕ್ಷಣೆ ಪಡೆಯಬಹುದಾಗಿದೆ. ಈ ಕಾಯ್ದೆಯನ್ವಯ ಸರ್ಕಾರ ಸ್ವಾಧೀನಪಡಿಸಿಕೊಂಡ ಹೆಚ್ಚುವರಿ ಭೂಮಿಯನ್ನು ಸ್ಥಾನಭ್ರಷ್ಟ ಗೇಣಿದಾರರಿಗೆ, ಕೃಷಿಕೂಲಿಗಳಿಗೆ, ಭೂರಹಿತರಿಗೆ ಹಾಗೂ ೨೦೦೦ ರೂ.ಗಳಿಗಿಂತ ಕಡಿಮೆ ವಾರ್ಷಿಕ ಆದಾಯವಿರುವ ಮಾಜಿ ಸೈನಿಕರಿಗೆ ವಿತರಿಸಬಹುದಾಗಿದ್ದು, ಹೆಚ್ಚುವರಿ ಭೂಮಿಯ ಶೇ.೫೦ರಷ್ಟು ಭಾಗವನ್ನು ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆಂದೇ ಮೀಸಲಿಡಲಾಗಿದೆ. ತಾಲೂಕುಮಟ್ಟದ ಭೂನ್ಯಾಯಮಂಡಳಿ ತೀರ್ಮಾನದ ವಿರುದ್ಧ ಮೇಲ್ಮನವಿ ಹೋಗಲು ಜಿಲ್ಲಾ ಮಟ್ಟದಲ್ಲಿ ಭೂಸುಧಾರಣಾ ಮೇಲ್ಮನವಿ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿತ್ತು. ಆದರೆ ಇದನ್ನು ೧೯೯೦ರಲ್ಲಿ ಸರ್ಕಾರ ರದ್ದುಗೊಳಿಸಿದೆ.

ಸರ್ಕಾರದ ಭೂಮಿಯನ್ನು ಸಮಾಜದ ದುರ್ಬಲ ವರ್ಗದವರಿಗೆ, ಭೂರಹಿತರಿಗೆ ಹಾಗೂ ಇತರ ಅರ್ಹರಿಗೆ ನೀಡುವ ನೀತಿಯನ್ನು ಆರಂಭದಲ್ಲಿ ಸರ್ಕಾರವು ಅನುಸರಿಸುತ್ತಿತ್ತು. ಆದರೆ ೧೯೬೯ರಿಂದೀಚೆಗೆ ಗ್ರಾಮದಲ್ಲಿ ವಾಸಿಸುವ ಭೂರಹಿತರಿಗೆ ಆದ್ಯತೆಯ ಮೇಲೆ ನೀಡಬೇಕೆಂಬ ನಿಯಮ ಜಾರಿಗೆ ಬಂದಿತು. ಈ ರೀತಿ ಭೂಮಿ ಪಡೆದವರು ಮೂರು ವರ್ಷದೊಳಗೆ ಅದನ್ನು ಸಾಗುವಳಿಗೆ ಒಳಪಡಿಸಬೇಕು. ಸ್ವಂತ ಉಳುಮೆ ಮಾಡಬೇಕು. ಅಲ್ಲದೆ ಅದನ್ನು ೧೫ ವರ್ಷ ಪರಭಾರೆ ಮಾಡುವಂತಿಲ್ಲ. ಈ ಸಂಬಂಧ ಭೂವಿಲೇವಾರಿ ಅರ್ಜಿಯ ಪರಿಶೀಲನೆ, ವಿಚಾರಣೆ ಹಾಗೂ ವಿತರಣೆಗಳ ಉಸ್ತುವಾರಿಯನ್ನು ತಹಶೀಲ್ದಾರರೇ ನೋಡಿಕೊಳ್ಳುತ್ತಾರೆ.

ಸಾರ್ವಜನಿಕ ಹಿತಾಸಕ್ತಿಗಾಗಿ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಹಕ್ಕನ್ನು ಹೊಂದಿರುವ ಸರ್ಕಾರ ಆ ಸಂಬಂಧ ೧೯೮೧ರ ಕಾಯ್ದೆಯಂತೆ ಸಾರ್ವಜನಿಕ ತಿಳುವಳಿಕೆಗಾಗಿ ಅಧಿಸೂಚನೆಯನ್ನು ಹೊರಡಿಸಿ ಜಿಲ್ಲಾಧಿಕಾರಿಗಳ ಮೂಲಕ ಪ್ರಕಟಿಸಲಾಗುತ್ತದೆ. ತತ್ಸಂಬಂಧ ಬರುವ ಸಾರ್ವಜನಿಕ ಅಹವಾಲನ್ನು ಜಿಲ್ಲಾಧಿಕಾರಿಗಳು ಆಲಿಸಿ ಪರಿಶೀಲಿಸಿದ ನಂತರ ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಹತ್ತು ಲಕ್ಷದವರೆಗಿನ ಪರಿಹಾರವಾದಲ್ಲಿ ಜಿಲ್ಲಾಧಿಕಾರಿಗಳು, ೨೦ ಲಕ್ಷ ರೂ.ಗಳವರೆಗಾದರೆ ವಿಭಾಗಾಧಿಕಾರಿ (ಪ್ರಸ್ತುತ ಪ್ರಾದೇಶಿಕ ಆಯುಕ್ತರು)ಗಳಿಗೆ ಹಾಗೂ ೨೦ ಲಕ್ಷಕ್ಕೂ ಹೆಚ್ಚಿನದಾದರೆ ಸರ್ಕಾರ ನೀಡಬಹುದಾಗಿದೆ.

**ಇತರ ತೆರಿಗೆಗಳು :** ಭೂಕಂದಾಯವಲ್ಲದೇ ಸರ್ಕಾರಕ್ಕೆ ಅನೇಕ ಮೂಲಗಳಿಂದ ತೆರಿಗೆ ರೂಪದಲ್ಲಿ ಆದಾಯ ಬರುತ್ತದೆ. ಅದರಂತೆ ತಾಲೂಕು ಮಟ್ಟದಲ್ಲೂ ಅಬ್ಕಾರಿ ತೆರಿಗೆ, ಮಾರಾಟ ತೆರಿಗೆ, ಮನರಂಜನಾ ತೆರಿಗೆ, ವಿದ್ಯುತ್ ತೆರಿಗೆ, ಕೃಷಿ ವರಮಾನ ತೆರಿಗೆ, ವೃತ್ತಿತೆರಿಗೆ, ಭೋಗ ಸವಲತ್ತು ತೆರಿಗೆ, ಸ್ಟ್ಯಾಂಪು ನೋಂದಣಿ ತೆರಿಗೆ, ಮೋಟಾರು ವಾಹನ ತೆರಿಗೆ ಅರಣ್ಯಾಭಿವೃದ್ಧಿ ತೆರಿಗೆ ಮುಂತಾದ ರಾಜ್ಯ ಮಟ್ಟದ ತೆರಿಗೆಗಳು ರಾಜ್ಯ ಬೊಕ್ಕಸಕ್ಕೆ ಕಾಯ್ದೆಯಂತೆ ಸಂದಾಯವಾಗುತ್ತಿದೆ. ಅಲ್ಲದೆ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ ಬರುವ ವರಮಾನ ತೆರಿಗೆ ಮುಂತಾದ ಕೇಂದ್ರ ಸರ್ಕಾರದ ತೆರಿಗೆಗಳಿಂದಲೂ ಸ್ವಲ್ಪಭಾಗ ರಾಜ್ಯ ಸರ್ಕಾರಕ್ಕೆ ಸಂದಾಯವಾಗುತ್ತದೆ.

**ಭೂಕಂದಾಯ ಸರ್ವೇಕ್ಷಣ :** ಪಿರಿಯಾಪಟ್ಟಣ ತಾಲೂಕಿನ ಮೊದಲ ಮೂಲ ಭೂಕಂದಾಯ ಸರ್ವೇಕ್ಷಣವನ್ನು ೧೮೮೪ರಲ್ಲಿ ಕೈಗೊಳ್ಳಲಾಯಿತು. ಆಗ ಇದು ಹುಣಸೂರು ತಾಲೂಕಿನಲ್ಲಿ ಅಂತರ್ಗತವಾಗಿತ್ತು. ೧೯೨೪ರಲ್ಲಿ ಅದರ ಮೊದಲ ಪರಿಷ್ಕರಣೆಯನ್ನು ಮಾಡಲಾಗಿತ್ತು. ಆಗ ಪಿರಿಯಾಪಟ್ಟಣ ಒಂದು ಉಪತಾಲೂಕಾಗಿತ್ತು. ಆ ಪ್ರಕಾರ ಪಿರಿಯಾಪಟ್ಟಣ ತಾಲೂಕು XIIIನೇ ವಲಯಕ್ಕೆ ಸೇರಿದ್ದು, ಹುಣಸೂರು ತಾಲೂಕು ಕೂಡ ಅದೇ ವಲಯದಲ್ಲಿತ್ತು. ಈ ರೀತಿ ನಿರ್ಧರಿಸಲ್ಪಟ್ಟ ಕಂದಾಯದರವು ಮುಂದಿನ ಮೂವತ್ತು ವರ್ಷಗಳವರೆವಿಗೂ ಚಲಾವಣೆಯಲ್ಲಿರುತ್ತಿದ್ದು, ೩೦ ವರ್ಷಗಳ ನಂತರ, ಅಂದರೆ ೧೯೫೪ರಲ್ಲಿ ಎರಡನೇ ಪರಿಷ್ಕೃತ ಕಂದಾಯ ದರವನ್ನು ನಿರ್ಧರಿಸಬೇಕಾಗಿತ್ತು. ಆದರೆ, ಅನಿವಾರ್ಯ ಕಾರಣಗಳಿಂದ ಅದನ್ನು ೧೯೬೪ರಲ್ಲಿ ಕೈಗೊಳ್ಳಲಾಯಿತು. ಆ ಪ್ರಕಾರ ಪ್ರಮಾಣಿತ ದರವನ್ನು ನಿಗದಿಪಡಿಸಿ ವಲಯ–XIII ರಲ್ಲೇ ಮುಂದುವರಿಸಲಾಯಿತು. ಆ ಪ್ರಕಾರ ತಾಲೂಕಿನ ಗ್ರಾಮಗಳನ್ನು ಒಂದು ಹಾಗೂ ಮೂರನೇ ಗುಂಪುಗಳ ನಡುವೆ ವಿತರಿಸಲಾಗಿತ್ತು. ಒಂದನೇ ಗುಂಪಿಗೆ ಸೇರಿದ ೧೨೧ ಹಳ್ಳಿಗಳಲ್ಲಿ ಒಣಭೂಮಿಗೆ ರೂ. ೩.೯೫ ಗದ್ದೆ ಹಾಗೂ ತೋಟಗಳಿಗೆ ೧೫; ಮೂರನೇ ಗುಂಪಿಗೆ ಸೇರಿದ ಹಳ್ಳಿಗಳಲ್ಲಿ ಎಕರೆಗೆ ಒಣಭೂಮಿಗೆ ರೂ. ೨.೮೫ ಗದ್ದೆಗೆ ರೂ. ೧೨ ಹಾಗೂ ತೋಟಕ್ಕೆ ರೂ. ೧೩ ಅನ್ನು ಪ್ರಮಾಣಿತ ದರವೆಂದು ಪ್ರತಿ ಎಕರೆಗೆ ನಿಗದಿಪಡಿಸಲಾಯಿತು. ಅಲ್ಲದೆ ೧೯೮೫ರ ಜುಲೈನಲ್ಲಿ ಹೊರಬಂದ ಸರ್ಕಾರಿ ಆದೇಶದಂತೆ ನೀರಾವರಿ ಕರವಾಗಿ, ಸರ್ಕಾರಿ ಮೂಲದಿಂದ ರೈತರು

ಪಡೆಯುವ ನೀರಾವರಿ ಸೌಕರ್ಯಕ್ಕಾಗಿ ಎಕರೆ ಲೆಕ್ಕದಲ್ಲಿ ಕಬ್ಬಿಗೆ ೧೫೦-೨೨೫, ಬತ್ತಕ್ಕೆ-೩೫/೪೦, ಗೋಧಿ-೨೨, ಜೋಳ-೨೨, ಕಡ್ಲೇಕಾಯಿ-೨೪, ತಂಬಾಕು-೨೪, ಹತ್ತಿ-೪೦, ತೋಟಬೇಳೆ-೪೦, ದ್ವಿದಳ ಧಾನ್ಯ-೧೫, ಮೆಕ್ಕೆಜೋಳ, ರಾಗಿ, ನವಣೆ, ಸಜ್ಜೆ, ಹೆಸರು, ಸಿಹಿಗೆಣಸು, ಈರುಳ್ಳಿ, ಕೊತ್ತಂಬರಿ ಮುಂತಾದವಕ್ಕೆ ೨೦ ರೂ.ಗಳನ್ನು ನೀರಾವರಿ ಕರ ಎಂದು ನಿಗದಿಪಡಿಸಲಾಯಿತು.

## ಸ್ಥಳೀಯ ಸ್ವಯಂ ಆಡಳಿತ

**ಗ್ರಾಮ ಪಂಚಾಯ್ತಿ ಇತಿಹಾಸ :** ೧೯೧೫ರಲ್ಲಿ ಹಲವು ಹಳ್ಳಿಗಳಿಗೆ ಒಂದರಂತೆ ಗ್ರಾಮ ಪಂಚಾಯ್ತಿಗಳು ಪ್ರಾರಂಭಗೊಂಡು ಗ್ರಾಮಗಳ ಅಭಿವೃದ್ಧಿ ಕಾರ್ಯಗಳ ಅನುಷ್ಠಾನಕ್ಕೆ ಸಹಕಾರಿಯಾದವು. ಒಬ್ಬ ಅಧ್ಯಕ್ಷ ಮತ್ತು ಹಲವು ಸದಸ್ಯರನ್ನೊಳಗೊಂಡ ಇವು ಪ್ರಮುಖವಾಗಿ ಶಿಕ್ಷಣ, ಆರೋಗ್ಯ, ನೀರು ಸರಬರಾಜು, ವಿದ್ಯುತ್ ಸರಬರಾಜು, ರಸ್ತೆ, ಒಳಚರಂಡಿ, ಸಂತೆ, ಜಾತ್ರೆಗಳು ಮುಂತಾದ ವ್ಯವಸ್ಥೆಗಳನ್ನು ನಿರ್ವಹಿಸುತ್ತಿವೆ.

**ಗ್ರಾಮ ಸಭೆ :** ಪ್ರತಿ ಗ್ರಾಮಕ್ಕೂ ಒಂದೊಂದು ಗ್ರಾಮಸಭೆ ಇದ್ದು, ಗ್ರಾಮದ ಕಲ್ಯಾಣಕ್ಕೆ ಸಂಬಂಧಿಸಿದ ಯೋಜನೆಗಳ ರಚನೆ, ವಿವಿಧ ಕಾರ್ಯಕ್ರಮಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಇದರ ಜವಾಬ್ದಾರಿಯಾಗಿದ್ದು, ಗ್ರಾಮಸಭೆಗಳ ಶಿಫಾರಸ್ಸುಗಳನ್ನು ಮಂಡಲ ಪಂಚಾಯ್ತಿಯು ಪರಿಗಣಿಸುತ್ತಿತ್ತು.

**ತಾಲೂಕು ಪಂಚಾಯಿತಿ :** ಮಂಡಲ ಪಂಚಾಯಿತಿಗಳು ಹಾಗೂ ಜಿಲ್ಲಾ ಪರಿಷತ್ ನಡುವೆ ಸಂಪರ್ಕ ಸೇತುವೆಯಾಗಿರುವ ಇದು ತಾಲೂಕಿನ ಚುನಾಯಿತ ಶಾಸಕರು, ಮಂಡಲ ಪಂಚಾಯ್ತಿ ಪ್ರಧಾನರು ಪ್ರಾಥಮಿಕ ವ್ಯವಸಾಯ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರ ಹಾಗೂ ಇತರರನ್ನು ಸದಸ್ಯರನ್ನಾಗಿ ಹೊಂದಿರುತ್ತದೆ. ಮಂಡಲ ಪಂಚಾಯ್ತಿಗಳಿಗೆ ಸಲಹೆ ಸೂಚನೆ ನೀಡುವುದರ ಜೊತೆಗೆ ತಾಲೂಕಿನ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳನ್ನು ಪರಿಶೀಲಿಸುತ್ತಿತ್ತು.

**ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ (೧೯೯೩)** ಗ್ರಾಮ ಸ್ವರಾಜ್ ವ್ಯವಸ್ಥೆಯನ್ನು ಉತ್ತಮಗೊಳಿಸುವ ದೃಷ್ಟಿಯಿಂದ ಈ ಕಾಯ್ದೆಯನ್ನು ೧೯೯೩ರಲ್ಲಿ ಜಾರಿಗೆ ತರಲಾಯಿತು. ಈ ಮೊದಲು ಕಾರ್ಯನಿರ್ವಹಿಸುತ್ತಿದ್ದ ಮಂಡಲ ಪಂಚಾಯ್ತಿ, ತಾಲೂಕು ಪಂಚಾಯಿತಿ ಸಮಿತಿಗಳ ಸ್ಥಳದಲ್ಲಿ ಗ್ರಾಮ ಪಂಚಾಯ್ತಿ ಹಾಗೂ ತಾಲೂಕು ಪಂಚಾಯ್ತಿಗಳು ಕಾರ್‍ಯಾರಂಭ ಮಾಡಿದವು. ಸಂವಿಧಾನದ ೭೩ನೆಯ ತಿದ್ದುಪಡಿಯ ನಂತರ ಜಾರಿಗೆ ಬಂದಿರುವ ಈ ಕಾಯ್ದೆಯನ್ವಯ ಗ್ರಾಮಸಭೆಗಳನ್ನು ಬಲಿಷ್ಟಗೊಳಿಸಲಾಗಿದೆ. ಈ ಕಾಯ್ದೆಯನ್ವಯ ಪ್ರತಿ ಗ್ರಾಮ ಪಂಚಾಯ್ತಿಗೆ ಆರಂಭದಲ್ಲಿ ಒಂದು ಲಕ್ಷ ರೂ.ಗಳ ಅನುದಾನ ನೀಡಲಾಗಿದ್ದು, ಅದನ್ನು ಸಿಬ್ಬಂದಿ ವೆಚ್ಚಕ್ಕೆ ಬಳಸದೆ, ನೀರು ಮತ್ತು ವಿದ್ಯುತ್ ವ್ಯವಸ್ಥೆಗೆ ಬಳಸಿಕೊಳ್ಳಬೇಕಾಗಿತ್ತು. ೧೯೯೧ರ ಜನಗಣತಿಯಂತೆ ತಾಲೂಕಿನಲ್ಲಿ ೩೬

ಗ್ರಾಮಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದು ೧೯೯೩ರ ಡಿಸೆಂಬರ್ ಕೊನೆಗೆ ಚುನಾವಣೆಗಳೂ ನಡೆದವು. ತಾಲೂಕು ಪಂಚಾಯ್ತಿಗಳಿಗೆ ೧೯೯೫ರ ಮಾರ್ಚ್‌ನಲ್ಲಿ ಚುನಾವಣೆ ನಡೆದವು. ಪ್ರತಿ ೧೦,೦೦೦ ಜನಸಂಖ್ಯೆಗೆ ಒಬ್ಬರಂತೆ ತಾಲೂಕು ಪಂಚಾಯ್ತಿಗೆ ಪ್ರತಿ ४೦,೦೦೦ ಜನಸಂಖ್ಯೆಗೆ ಒಬ್ಬರಂತೆ ಜಿಲ್ಲಾ ಪಂಚಾಯ್ತಿಗೆ ಪ್ರತಿನಿಧಿಗಳನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಇದು ಐದು ವರ್ಷ ಕಾಲಾವಧಿಯನ್ನು ಹೊಂದಿದ್ದು, ಪ್ರತಿ ಹಂತದಲ್ಲೂ ಗರಿಷ್ಟ ಮೀಸಲಾತಿಯುನ್ನು ಶೇ (೨೩+೩೩) ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ. ತಾಲೂಕಿನಲ್ಲಿರುವ ಲೋಕಸಭಾ ಹಾಗೂ ವಿಧಾನಸಭಾ ಸದಸ್ಯರು ಆಯಾ ತಾಲೂಕಿನಲ್ಲಿ ಮತದಾರರಾಗಿ ನೋಂದಣಿಗೊಂಡಿರುವ ಲೋಕಸಭೆ ಹಾಗೂ ವಿಧಾನಸಭಾ ಸದಸ್ಯರು ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಇದು ಒಳಗೊಂಡಿರುತ್ತದೆ. ಸುಮಾರು ಆರ್ಧಕ್ಕೂ ಹೆಚ್ಚು ಅಭಿವೃದ್ಧಿ ಕಾರ್ಯಕ್ರಮ ಹಾಗೂ ಯೋಜನೆಗಳನ್ನು ತಾಲೂಕು ಮಟ್ಟದಲ್ಲೇ ಅನುಷ್ಠಾನಗೊಳಿಸಲಾಗುತ್ತಿದ್ದು, ಅಧ್ಯಕ್ಷರು, ಉಪಾಧ್ಯಕ್ಷರ ಆಯ್ಕೆಯಲ್ಲಿ ಪ.ಜಾತಿ ಹಾಗೂ ಪ.ಪಂಗಡ ಹಿಂದುಳಿದ ವರ್ಗ ಹಾಗೂ ಮಹಿಳೆಯರಿಗೂ ಮೀಸಲಾತಿ ಒದಗಿಸಲಾಗಿದೆ. ಗ್ರಾಮಪಂಚಾಯ್ತಿ ಹಾಗೂ ತಾಲೂಕು ಪಂಚಾಯ್ತಿ ಕಾರ್ಯ ಪ್ರಗತಿಯನ್ನು ಜಿಲ್ಲಾ ಪಂಚಾಯತ್ ಪರಿಶೀಲಿಸುತ್ತದೆ.

೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೨೬ ಗ್ರಾಮಪಂಚಾಯ್ತಿಗಳ ವಿವರ: ಕಣಗಾಲು(೧४), ಹಲಗನಹಳ್ಳಿ(೧೮), ಅತ್ತಿಗೋಡು(೧೯), ಕಿತ್ತೂರು(೨೦), ಹಂಡಿತವಳ್ಳಿ(೧೯), ರಾನಂದೂರು(೨೦), ಬೆಟ್ಟದತುಂಗ(೧೭), ಬೆಟ್ಟದಪುರ(೨೨), ಭುವನಹಳ್ಳಿ(೨೦), ಹಿಟ್ನಹೆಬ್ಬಾಗಿಲು(೨೦), ರಾಮನಾಥತುಂಗ(೧೯), ದೊಡ್ಡಬ್ಯಾಲಾಳು(೨೦), ಮಾಕೋಡು(೧೭), ಕಂಪಲಾಪುರ(೨೨), ಪಂಚವಳ್ಳಿ(೨೩), ಮಾಲಂಗಿ(೨೨), ಮುತ್ತೂರು(೧೭), ಚಿಟ್ಟೇನಹಳ್ಳಿ(೨೧),ಹುಣಸವಾಡಿ(೨೨), ಬೈಲಕುಪ್ಪೆ(೨೩), ಕೊಪ್ಪ(೧೯), ಚಿಕ್ಕನೇರಳೆ(೧೯), ಚಪ್ಪರದಹಳ್ಳಿ(೨೦), ಚನ್ನೇಕಲ್ ಕಾವಲ್(೧೩), ಹಾಗೂ ದೊಡ್ಡಕಮರವಳ್ಳಿ(೨೦). ಕಂಸದಲ್ಲಿ ನೀಡಿರುವ ಸಂಖ್ಯೆಯು ಆಯಾ ಗ್ರಾಮಪಂಚಾಯ್ತಿಯ ಸದಸ್ಯರ ಸಂಖ್ಯೆಯನ್ನು ಸೂಚಿಸುತ್ತದೆ.

**ಪಟ್ಟಣ ಪಂಚಾಯ್ತಿ :** ಮೂರು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇದ್ದ ಪಿರಿಯಾಪಟ್ಟಣದ ಆಡಳಿತಕ್ಕೆಂದು ೧೮೯೮ರಲ್ಲಿ ಪುರಸಭಾ ಸಮಿತಿಯನ್ನು ರಚಿಸಲಾಯಿತು. ಅದರ ಅಧ್ಯಕ್ಷರನ್ನು ಜಿಲ್ಲಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಸರ್ಕಾರ ನೇಮಕಮಾಡುತ್ತಿತ್ತು. ಇದನ್ನು ಮುಂದೆ ೧೯೦೭ರಲ್ಲಿ ಪುರಸಭೆ ದರ್ಜೆಗೇರಿಸಲಾಯಿತು. ಆದರೆ ೧೯೨೮–೨೯ರಲ್ಲಿ ಇದು ಉಪಪುರಸಭೆಯ ಸ್ಥಾನಕ್ಕಿಳಿಯಿತು. ಇದೇ ಸ್ಥಿತಿ ೧೯೮೬ರ ವರೆವಿಗೂ ಮುಂದುವರಿಯಿತು. ಆದರೆ ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆಯನ್ವಯ, ೧೯೮೫ರಲ್ಲಿ ಪಿರಿಯಾಪಟ್ಟಣದ ಆಡಳಿತವು ಮಂಡಲಪಂಚಾಯ್ತಿಯ ನಿಯಂತ್ರಣಕ್ಕೆ ಒಳಪಟ್ಟಿತು. ೧೯೮೬–೮೭ರ ಸಾಲಿನಲ್ಲಿ ಪಿರಿಯಾಪಟ್ಟಣ, ಪುರಸಭೆಯ ಆದಾಯ ೫,४೭,४೧೧ ರೂ.ಗಳಿದ್ದು, ೫,೬೫,೭೯४ ರೂ.ಗಳನ್ನು ವೆಚ್ಚ ಮಾಡಲಾಗಿತ್ತು. ಮುಂದೆ ೧೯೯೫ರಲ್ಲಿ ಜಿಲ್ಲಾಪಂಚಾಯತ್ ಕಾಯ್ದೆಯು ಜಾರಿಗೆ ಬಂದ ಮೇಲೆ, ಸ್ಥಳೀಯ ಸ್ವಯಂ ಆಡಳಿತ

ವ್ಯವಸ್ಥೆ ಮಾರ್ಪಾಟುಗಳಾಗಿ ಮಂಡಲ ಪಂಚಾಯತ್ ಸ್ಥಾನದಲ್ಲಿ ಪಟ್ಟಣ ಪಂಚಾಯತ್‌ಗಳು ಬಂದವು. ಅದರಂತೆ ಇಂದು ಪಟ್ಟಣ ಪಂಚಾಯ್ತಿಯ ಆಡಳಿತಕ್ಕೆ ಪಿರಿಯಪಟ್ಟಣವು ಒಳಪಟ್ಟಿದೆ. ಪ್ರಸ್ತುತ ೧೩ ವಾರ್ಡ್‌ಗಳನ್ನು ಈ ಪಟ್ಟಣವು ಹೊಂದಿದೆ.

ಕರ್ನಾಟಕ ಜಿಲ್ಲಾ ಪರಿಷತ್ ಕಾಯ್ದೆ ೧೯೮೩ರ ಪ್ರಕಾರ ೧೯೮೭ರ ನಂತರ ಮಂಡಲ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾ ಪರಿಷತ್ತನ್ನು ಸ್ಥಾಪನೆಮಾಡಲಾಯಿತು. ಆನಂತರ ಅವಕ್ಕೆ ಬದಲಾಗಿ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ. ಅವು ನಾನಾ ಅಭಿವೃದ್ಧಿ ಚಟುವಟಿಕೆಗಳನ್ನು ಪಂಚಾಯ್ತಿಗಳ ಮೂಲಕ ನಡೆಸುತ್ತಿವೆ.

**ಗ್ರಾಮಪಂಚಾಯ್ತಿ :** ಕರ್ನಾಟಕ ಪಂಚಾಯತ್ ರಾಜ್ ೧೯೯೩ರ ಕಾಯ್ದೆಯನ್ವಯ ತಾಲೂಕಿನಲ್ಲಿ ಒಟ್ಟು ೨೬ ಗ್ರಾಮ ಪಂಚಾಯ್ತಿಗಳಿದ್ದು, ಒಂದು ಪಟ್ಟಣ ಪಂಚಾಯ್ತಿ ಇರುತ್ತದೆ. ಗ್ರಾಮೀಣ ಆಡಳಿತದಲ್ಲಿ ತಾಲೂಕು ಮತ್ತು ಗ್ರಾಮ ಪಂಚಾಯ್ತಿಗಳು ಹಲವಾರು ಯೋಜನೆಗಳನ್ನು ಜಾರಿಗೆ ತರುತ್ತಿವೆ. ಇವು ಪ್ರಮುಖವಾಗಿ ಕುಡಿಯುವ ನೀರು, ಬೀದಿ ದೀಪ, ಒಳಚರಂಡಿ, ಆರೋಗ್ಯ, ಶಿಕ್ಷಣ, ನಿವೇಶನ, ಕುರಿ, ಕೋಳಿ, ಹಂದಿ ಸಾಕಾಣಿಕೆ ಹಾಗೂ ಪಶು ಸಂಗೋಪನಾ ಚಟುವಟಿಕೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿವೆ.

**ಪೊಲೀಸ್ ಆಡಳಿತ ವ್ಯವಸ್ಥೆ :** ಪ್ರಾಚೀನ ಕಾಲದಲ್ಲಿ ಕಾನೂನು ಮತ್ತು ಶಾಂತಿ ಪರಿಪಾಲನೆಯ ಜೊತೆಗೆ ಕಳ್ಳತನ–ದರೋಡೆರಹಿತ ವಾತಾವರಣವನ್ನು ಗ್ರಾಮಗಳಲ್ಲಿ ಕಾಯ್ದುಕೊಳ್ಳುವ ಹೊಣೆ ಗ್ರಾಮದ ಮುಖ್ಯಸ್ಥರಾಗಿರುತ್ತಿದ್ದ ಗ್ರಾಮವೃದ್ಧ ಅಥವಾ ಗಾವುಂಡರ ಕರ್ತವ್ಯವಾಗಿತ್ತು. ನಂತರದಲ್ಲಿ ಇವರನ್ನು ಪಟೇಲರೆಂದೂ ಕರೆಯಲಾಗುತ್ತಿತ್ತು. ವಂಶಪಾರಂಪರ್ಯವಾಗಿ ಗೌಡಿಕೆ ಮಾಡುತ್ತಿದ್ದ ಇವರ ನೆರವಿಗೆ ತಳವಾರರಿರುತ್ತಿದ್ದರು. ನಗರಗಳಲ್ಲೂ ಕಾನೂನು ಪರಿಪಾಲನೆಯಲ್ಲಿ ತೊಡಗಿರುತ್ತಿದ್ದ ಕಂದಾಚಾರ ವಿಭಾಗಕ್ಕೆ ದಳವಾಯಿ ಮುಖ್ಯಸ್ಥನಾಗಿದ್ದು, ಠಾಣೆದಾರರು ತಾಲೂಕಿನ ಠಾಣೆಯಲ್ಲೂ, ಹೋಬಳಿದಾರರು ಹೋಬಳಿಗಳಲ್ಲೂ ಪೊಲೀಸ್ ಕಾರ್ಯನಿರ್ವಹಿಸುತ್ತಿದ್ದು, ಓಲೆಕಾರರು, ಮತ್ತು ಡಂಗುರದವರೂ ಈ ವಿಭಾಗದಲ್ಲಿದ್ದರು. ಜಾತಿ ಕಟ್ಟುಪಾಡಿನ ಪರಿಪಾಲನೆ, ಕಳ್ಳತನ ತಪ್ಪಿಸುವುದು, ವ್ಯಾಪಾರ ವಹಿವಾಟಿನ ಕ್ರಮಬದ್ಧತೆ ಹಾಗೂ ವಿವಿಧ ಅಪರಾಧಿಗಳನ್ನು ಗುರುತಿಸಿ ಬಂಧಿಸುವುದೇ ಮುಂತಾದ ಕಾರ್ಯವನ್ನು ಕಂದಾಚಾರ ವಿಭಾಗದವರು ಮಾಡಬೇಕಾಗಿತ್ತು. ಇದು ಹೈದರ್–ಟಿಪ್ಪು ಕಾಲದಲ್ಲೂ ಮುಂದುವರಿಯಿತು. ಆದರೆ ಟಿಪ್ಪು ಹಾಗೂ ದಿವಾನ್ ಪೂರ್ಣಯ್ಯನವರ ಆಡಳಿತದಲ್ಲಿ ಪಟೇಲರ ಸಂಖ್ಯೆ ಸಾಕಷ್ಟು ಕಡಿಮೆಯಾಗಿ ಕಂದಾಚಾರ ಸಿಪಾಯಿಗಳು ನೇಮಕಗೊಂಡರು. ಅಪರಾಧಿಗಳನ್ನು ಬಂಧಿಸಿ, ಜೈಲಿನಲ್ಲಿಡುವುದು, ಕೋಟೆಯ ಸಂರಕ್ಷಣೆ, ಅಂಚೆ ಚೀಲ, ಪಲ್ಲಕ್ಕಿಗಳನ್ನು ಹೊರುವುದೇ ಮುಂತಾದ ಕಾರ್ಯವನ್ನು ಇವರು ನಿರ್ವಹಿಸಬೇಕಾಗಿತ್ತು. ೧೮೩೪ರ ಹುಕುಂನಾಮೆಯ ಜಾರಿಯೊಂದಿಗೆ ಕಂದಾಚಾರದ ಸಿಪಾಯಿಗಳು ಸಂಪೂರ್ಣ ಪೊಲೀಸ್ ಸಿಪಾಯಿಗಳಾದರು. ಇವರಿಗೆ ತಾಲೂಕಿನಲ್ಲಿ ಜೈಲು ಹಾಗೂ ಖಜಾನೆಗಳ ಸಂರಕ್ಷಣೆ,

ಸೈನ್ಯಕ್ಕೆ ಬೇಕಾದ ವಸ್ತುಗಳ ಖರೀದಿ, ಬೇಸಾಯದ ಉಸ್ತುವಾರಿಯ ಜೊತೆಗೆ ಭೂಕಂದಾಯದ ಶೇಖರಣೆಯಲ್ಲಿ ಕಂದಾಯ ನೌಕರರಿಗೆ ನೆರವಾಗುವುದೇ ಮುಂತಾದ ಕಾರ್ಯಗಳನ್ನೂ ವಹಿಸಲಾಗಿತ್ತು. ೧೮೮೫ರ ವೇಳೆಗೆ, ತಾಲೂಕು ಮಟ್ಟದಲ್ಲಿ ಇನ್ಸ್‌ಪೆಕ್ಟರ್ ಹಾಗೂ ಉಪತಾಲೂಕು ಮಟ್ಟದಲ್ಲಿ ಜಮೇದಾರರು ಕಾನೂನು ಮತ್ತು ಶಾಂತಿ ಪಾಲನೆಯಲ್ಲಿ ಆಡಳಿತಯಂತ್ರಕ್ಕೆ ನೆರವಾಗುತ್ತಿದ್ದರು. ತಾಲೂಕು ಉಪತಾಲೂಕುಗಳಲ್ಲಿ ಲಾಕಪ್‌ಗಳು ಆರಂಭಗೊಂಡವು. ೧೮೯೨ರಲ್ಲಿ ಅವುಗಳ ಮೇಲ್ವಿಚಾರಣೆಯನ್ನು ನ್ಯಾಯಾಂಗಕ್ಕೇ ವಹಿಸಲಾಗಿತ್ತು. ೧೮೮೫ರ ವೇಳೆಗೆ ತಾಲೂಕು ಮಟ್ಟದಲ್ಲಿ ಇನ್ಸ್‌ಪೆಕ್ಟರ್ ಹಾಗೂ ಉಪತಾಲೂಕು ಮಟ್ಟದಲ್ಲಿ ಜಮೇದಾರರು ಕಾನೂನು, ಶಾಂತಿಪಾಲನೆಯಲ್ಲಿ ಆಡಳಿತ ಯಂತ್ರಕ್ಕೆ ನೆರವಾಗುತ್ತಿದ್ದರು. ತಾಲೂಕು–ಉಪತಾಲೂಕುಗಳಲ್ಲಿ ಲಾಕಪ್‌ಗಳು ಆರಂಭಗೊಂಡವು. ೧೮೯೨ರಲ್ಲಿ ಅವುಗಳ ಮೇಲ್ವಿಚಾರಣೆಯನ್ನು ನ್ಯಾಯಾಂಗಕ್ಕೆ ವಹಿಸಲಾಯಿತು. ಆದರೆ ತಾಲೂಕು ಮಟ್ಟದಲ್ಲಿ ಪೊಲೀಸರು ಅಮಲ್ದಾರರ ನಿಯಂತ್ರಣಕ್ಕೊಳಪಟ್ಟಿದ್ದು ಅಗತ್ಯವಿದ್ದೆಡೆ ಸ್ಟೇಷನ್‌ಗಳನ್ನು ಸ್ಥಾಪಿಸಲಾಯಿತು. ಆ ದಿನಗಳಲ್ಲಿ ಗ್ರಾಮಪೊಲೀಸರಿಗೆ ಬಿದಿರಿನ ಲಾಟಿಯೇ ಪ್ರಧಾನ ಅಸ್ತ್ರವಾಗಿತ್ತು. ೧೮೯೧ರಲ್ಲಿ ಗ್ರಾಮ ಪೊಲೀಸ್ ಹಾಗೂ ಖಾಯಂ ಪೊಲೀಸರುಗಳಿದ್ದು, ಪೊಲೀಸ್ ಕಾರ್ಯದಲ್ಲಿ ತೊಡಗಿದ್ದರು. ಗ್ರಾಮಪೊಲೀಸರು, ವಂಶಪಾರಂಪರ್ಯವಾಗಿ ಬಂದಿದ್ದ ಪಟೇಲ, ತಳವಾರ ಹಾಗೂ ತೋಟಿಗಳಾಗಿದ್ದು, ಖಾಯಂ ಪೊಲೀಸರಿಗೆ ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳಲು ನೆರವಾಗಬೇಕಿತ್ತು. ಅಲ್ಲದೇ ಗ್ರಾಮದಲ್ಲಿ ರಾತ್ರಿಯಿಡೀ ಗಸ್ತು ಹಾಕುತ್ತಾ, ಛತ್ರ, ಗರಡಿಮನೆ ಹಾಗೂ ಗ್ರಾಮೀಣರ ಆಸ್ತಿ ಪಾಸ್ತಿ ರಕ್ಷಣೆ ಮಾಡಬೇಕಿತ್ತು. ಅವರಿಗೆ ೧೯೦೧ರಲ್ಲಿ ಸಮವಸ್ತ್ರ ಮತ್ತು ಕತ್ತಿಯನ್ನು ನೀಡಲಾಯಿತು. ೧೯೪೫–೪೬ರ ವೇಳೆಗೆ ಈ ತಾಲೂಕಿನಲ್ಲೂ ಪೊಲೀಸ್ ಠಾಣೆಗಳು ಆರಂಭಗೊಂಡು ಪೊಲೀಸ್ ಇನ್ಸ್‌ಪೆಕ್ಟರ್, ಹೆಡ್ ಕಾನ್‌ಸ್ಟೇಬಲ್‌ಗಳನ್ನು ಹೊಂದಿದ್ದವು.

ಹಿಂದೆ ತಾಲೂಕಿನ ಕಾನೂನು ಸುವ್ಯವಸ್ಥೆಗಾಗಿ ಒಂದು ಪೋಲೀಸ್ ಠಾಣೆ ಕಾರ್ಯನಿರ್ವಹಿಸುತ್ತಿತ್ತು. ಅದರ ವ್ಯಾಪ್ತಿಗೆ ತಾಲೂಕಿನ ಎಲ್ಲಾ ಹಳ್ಳಿಗಳು ಒಳಪಟ್ಟಿದ್ದವು. ಪ್ರಸ್ತುತ ತಾಲೂಕಿನಲ್ಲಿ ಮೂರು ಪೊಲೀಸ್ ಠಾಣೆಗಳು ಪಿರಿಯಾಪಟ್ಟಣ, ಬೈಲಕುಪ್ಪೆ ಮತ್ತು ಬೆಟ್ಟದಪುರಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ ತಾಲೂಕಿಗೆ ಪೊಲೀಸ್ ವೃತ್ತ ನಿರೀಕ್ಷಕರ ಕಛೇರಿಯು ಇರುತ್ತದೆ. ಬೈಲಕುಪ್ಪೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ೨೬ ಗ್ರಾಮಗಳಿದ್ದು ಉಳಿದ ಗ್ರಾಮಗಳು ಪಿರಿಯಾಪಟ್ಟಣ ಮತ್ತು ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿವೆ.

ಇತ್ತೀಚಿನ ಸಮೀಕ್ಷೆಯಂತೆ ಒಂದು ವರ್ಷದಲ್ಲೆ ೫೦೦ಕ್ಕೂ ಹೆಚ್ಚು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿದೆ. ೨೦೦೮–೦೯ರ ಸಾಲಿನಲ್ಲಿ ತಾಲೂಕಿನಲ್ಲಿ ಒಟ್ಟು ೯೯ ಅಪಘಾತಗಳು ಸಂಭವಿಸಿದ್ದು, ೨೮ ಮಂದಿ ಮೃತಪಟ್ಟಿದ್ದರೆ, ೧೭೭ ಮಂದಿ ಗಾಯಗೊಂಡಿದ್ದರೆಂದು ಪೊಲೀಸ್ ಇಲಾಖೆಯ ವರದಿ ತಿಳಿಸುತ್ತದೆ.

**ಗ್ರಾಮರಕ್ಷಣಾ ದಳ :** ಗ್ರಾಮೀಣ ಪ್ರದೇಶದಲ್ಲಿ ಗ್ರಾಮರಕ್ಷಣಾ ದಳಗಳನ್ನು ೧೯೬೫ರ ಕಾಯ್ದೆಯನ್ವಯ ರಚಿಸಲಾಗಿದ್ದು, ಇದು ಗ್ರಾಮೀಣಪೊಲೀಸ್ ವ್ಯವಸ್ಥೆಗೆ ಪರ್ಯಾಯವಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದ್ದು, ಖಾಯಂ ಪೊಲೀಸರಿಗೆ ಪೂರಕಮಾಹಿತಿ ಹಾಗೂ ಸಹಕಾರ ನೀಡುತ್ತವೆ. ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟರು ಇವರನ್ನು ನೇಮಿಸುವ ಅಧಿಕಾರವನ್ನು ಹೊಂದಿದ್ದು, ಅಗತ್ಯಬಿದ್ದಾಗ ಅವರನ್ನು ತುರ್ತು ರಕ್ಷಣಾ ಕಾರ್ಯಕ್ಕೆ ಬಳಸಿಕೊಳ್ಳಲು ಮುಂದಾಗಬಹುದಾಗಿದೆ. ಅದರಂತೆ ತಾಲೂಕಿನಲ್ಲಿ ದಳಪತಿಗಳನ್ನು ನೇಮಿಸಿ, ಗ್ರಾಮರಕ್ಷಣಾ ಗುಂಪನ್ನು ರಚಿಸಲಾಗಿದ್ದು, ಪ್ರತೀ ಗುಂಪಿನಲ್ಲೂ ಆಯಾ ಗ್ರಾಮದ ೨೫ ಮಂದಿ ಸದಸ್ಯರಿರುತ್ತಾರೆ.

**ಗೃಹರಕ್ಷಕದಳ :** ಇವರು ಕಾನೂನು ಹಾಗೂ ಶಾಂತಿ ಪರಿಪಾಲನೆಯಲ್ಲಿ ಪೊಲೀಸರಿಗೆ ನೆರವು ನೀಡುವ ಸ್ವಯಂ ಸೇವಕರಾಗಿದ್ದು, ಇಚ್ಛೆಯುಳ್ಳ ಆರೋಗ್ಯವಂತ ನಾಗರಿಕರಿಗೆ ಪೊಲೀಸ್ ತರಬೇತಿ ನೀಡಿ ಅಗತ್ಯಕ್ಕನುಗುಣವಾಗಿ ಬಳಸಿಕೊಳ್ಳಲಾಗುತ್ತದೆ. ಪಿರಿಯಾಪಟ್ಟಣ ತಾಲೂಕಿನಲ್ಲಿ ಗೃಹರಕ್ಷಕ ದಳವು ಕಾರ್ಯಪ್ರವೃತ್ತವಾಗಿದ್ದು, ೧೯೮೭ರ ವೇಳೆಗೆ ೭೫ ಮಂದಿ ನೋಂದಣಿಗೊಂಡಿದ್ದು, ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದರು. ಇಂದಿಗೂ ಇದು ಇತರೆಡೆಗಳಂತೆ ತಾಲೂಕಿನಲ್ಲೂ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದೆ.

**ನ್ಯಾಯಾಡಳಿತ :** ಪ್ರಾಚೀನ ಕಾಲದಲ್ಲಿ ಇತರೆಡೆಗಳಂತೆ ತಾಲೂಕಿನಲ್ಲೂ ನ್ಯಾಯಾಡಳಿತವು ಗ್ರಾಮೀಣ ಭಾಗದಲ್ಲಿ ಸಾಂಪ್ರದಾಯಕವಾಗಿ ಜಾತಿಕಟ್ಟೆಮನೆ, ಪಂಚಾಯ್ತಿಕಟ್ಟೆಗಳಲ್ಲಿ ಕೇಂದ್ರೀಕೃತವಾಗಿದ್ದು, ವೈಯಕ್ತಿಕವಾಗಿ ಬಗೆಹರಿಯದ ವ್ಯಾಜ್ಯಗಳನ್ನು ಜಾತಿಮಟ್ಟದಲ್ಲಿ ಆಯಾ ಜಾತಿಯ ಪ್ರಮುಖರನ್ನೊಳಗೊಂಡ ಜಾತಿಕಟ್ಟೆಮನೆಯಲ್ಲೂ ಗ್ರಾಮಮಟ್ಟದಲ್ಲಿ ಆಯಾ ಗ್ರಾಮದ ಹಿರಿಯರನ್ನೊಳಗೊಂಡ ಪಂಚಾಯ್ತಿಕಟ್ಟೆಗಳಲ್ಲೂ ಪರಿಹರಿಸಲಾಗುತ್ತಿತ್ತು. ಅದಕ್ಕೂ ಮೀರಿ ಮುಂದುವರಿದರೆ, ಹೋಬಳಿ ಮಟ್ಟದಲ್ಲಿ ಪ್ರಮುಖ ಗ್ರಾಮಗಳ ಪ್ರತಿಷ್ಠಿತ ಹಿರಿಯರನ್ನೊಳಗೊಂಡ ಮೇಲ್ಪಂಚಾಯ್ತಿಯಲ್ಲಿ ಬಗೆಹರಿಸಿಕೊಳ್ಳಲಾಗುತ್ತಿತ್ತು. ವ್ಯಾಜ್ಯಗಳನ್ನು ಸಾಧ್ಯವಾದಷ್ಟು ಜಾತಿಕಟ್ಟೆಮನೆ ಹಾಗೂ ಗ್ರಾಮ ಪಂಚಾಯ್ತಿಕಟ್ಟೆಗಳಲ್ಲೇ ಪರಿಹರಿಸಲಾಗುತ್ತಿದ್ದು, ಮೇಲ್ಮಟ್ಟಕ್ಕೆ ವ್ಯಾಜ್ಯವನ್ನು ಕೊಂಡೊಯ್ಯುವುದು ಹಳ್ಳಿಯ ಗೌರವಕ್ಕೆ ಕುಂದು ತಂದಂತೆ ಎಂಬ ಅಭಿಪ್ರಾಯ ಹಳ್ಳಿಗರಲ್ಲಿ ಸಾಮಾನ್ಯವಾಗಿತ್ತು. ಸಾಮಾನ್ಯವಾಗಿ ಗ್ರಾಮದ ಅರಳೀಕಟ್ಟೆ, ದೇವಸ್ಥಾನ, ಅಯ್ಯನವರ ಚಾವಡಿ, ಊರ ಮಂಟಪಗಳಲ್ಲಿ ಪಂಚಾಯ್ತಿ ಸಭೆಯನ್ನು ಅಮಾವಾಸ್ಯೆ, ಹುಣ್ಣಿಮೆ ಹಾಗೂ ಗ್ರಹಣದ ದಿನಗಳನ್ನು ಹೊರತುಪಡಿಸಿ, ಪ್ರಶಸ್ತ ದಿನಗಳಂದು ಸಂಜೆಯ ತಂಪು ಹೊತ್ತಿನಲ್ಲಿ ಸೇರಿಸಲಾಗುತ್ತಿದ್ದು, ದೀಪದ ಬೆಳಕನ್ನೇ ಹಲವೆಡೆ ಸಾಕ್ಷಿಯಾಗಿ ಪರಿಗಣಿಸಲಾಗುತ್ತಿತ್ತು. ವಿಚಾರಣೆಯ ಸಂದರ್ಭದಲ್ಲಿ ಅಗ್ನಿದಿವ್ಯ, ಜಲದಿವ್ಯ ಮುಂತಾದ ದಿವ್ಯಪರೀಕ್ಷೆಗೆ ಆರೋಪಿಗಳನ್ನು ಒಳಪಡಿಸಲಾಗುತ್ತಿತ್ತು. ಅಪರಾಧ ಸಾಬೀತಾದಲ್ಲಿ ದೈಹಿಕ ಶಿಕ್ಷೆ, ನಗದು ದಂಡವಿಧಿಸಲಾಗುತ್ತಿದ್ದು, ಅಪರಾಧವು ಗುರುತರವಾಗಿದ್ದಲ್ಲಿ ಕೆಲವೊಮ್ಮೆ ಸಾಮಾಜಿಕ ಬಹಿಷ್ಕಾರ, ಇಲ್ಲವೇ ಗಡಿಪಾರು ಶಿಕ್ಷೆಯನ್ನೂ ಜಾರಿಗೊಳಿಸಲಾಗುತ್ತಿತ್ತು. ಹಿಂದೂಗಳಲ್ಲಿ ನ್ಯಾಯತೀರ್ಮಾನಗಳು ಅವರ ಧರ್ಮಸಿದ್ಧಾಂತಕ್ಕನುಗುಣವಾಗಿ ಸಾಂಪ್ರದಾಯಿಕ

ರೀತಿಯಲ್ಲಿ ಆಗುತ್ತಿದ್ದು, ಮುಸ್ಲಿಮರಲ್ಲಿ ನ್ಯಾಯ ತೀರ್ಮಾನವನ್ನು ಧಾರ್ಮಿಕ ಹಿನ್ನೆಲೆಯಿಂದ ಕೂಡಿದ ಖಾಜಿ ನ್ಯಾಯದ ಮೂಲಕ ಬಗೆಹರಿಸುವುದು ರೂಢಿಯಲ್ಲಿತ್ತು. ನ್ಯಾಯಾಂಗದ ಉನ್ನತ ಸ್ಥಾನದಲ್ಲಿ ರಾಜನಿರುತ್ತಿದ್ದು, ಅವನಲ್ಲಿ ಪರಮಾಧಿಕಾರ ಕೇಂದ್ರೀಕೃತವಾಗಿರುತ್ತಿತ್ತು.

ಬ್ರಿಟಿಷರ ಆಗಮನದೊಂದಿಗೆ ನ್ಯಾಯಾಡಳಿತದಲ್ಲೂ ಸಾಕಷ್ಟು ಬದಲಾವಣೆಗಳಾದವು. ಆದರೂ ಸಂಪ್ರದಾಯದಂತೆ ಕಂದಾಯ ಅಧಿಕಾರಿಗಳಿಗೆ ನ್ಯಾಯಾಂಗ ಕಾರ್ಯಗಳನ್ನು ವಹಿಸಲಾಗಿದ್ದು, ಅಮಲ್ದಾರರು (ತಹಶೀಲ್), ಕ್ರಿಮಿನಲ್ ದಾವೆಗಳ ವಿಚಾರಣೆಯನ್ನು ನಡೆಸುತ್ತಿದ್ದರು. ಗ್ರಾಮಮಟ್ಟದಲ್ಲಿ ಪಂಚಾಯ್ತಿಗಳಲ್ಲದೆ ತಾಲೂಕು ಮಟ್ಟದಲ್ಲಿ ಅಮಲ್ದಾರರು ಪಂಚಾಯ್ತಿ ಸೇರಿಸಿ, ಅಹವಾಲುಗಳನ್ನು ಆಲಿಸಿ, ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿ ತಪ್ಪಿತಸ್ಥರಿಗೆ ದಂಡಿಸುತ್ತಿದ್ದರು. ಕಮೀಷನರುಗಳ ಆಡಳಿತದೊಂದಿಗೆ (೧೮೩೧) ತಾಲೂಕು ಮಟ್ಟದಲ್ಲಿ ಅಮಲ್ ಹಾಗೂ ಟೌನ್ ಮುನ್ಸಿಫ್ ನ್ಯಾಯಾಲಯಗಳು ೧೮೩೪ರಲ್ಲಿ ಸ್ಥಾಪನೆಗೊಂಡವು. ಒಂದು ನೂರು ರೂಪಾಯಿ ಒಳಗಿನ ಮೌಲ್ಯದ ದಾವೆಗಳನ್ನು ತೀರ್ಮಾನಿಸುವ ಅಧಿಕಾರಿ ಟೌನ್ ಮುನ್ಸಿಫರಿಗಿತ್ತು. ಅಮಲ್ ನ್ಯಾಯಾಲಯಗಳಲ್ಲಿ ತೀರ್ಮಾನವಾಗದ ದಾವೆಗಳ ಮೇಲ್ಮನವಿಯನ್ನು ಪ್ರಿನ್ಸಿಪಲ್ ಸದರ್ ಮುನ್ಸೀಫ್ ನ್ಯಾಯಾಲಯಕ್ಕೆ ಕೊಂಡೊಯ್ಯ ಬಹುದಾಗಿತ್ತು. ಅಮಲ್ದಾರರ ನೆರವಿಗೆ ಪೇಷ್ಕಾರರಿದ್ದು, ಅರ್ಹ ಪೇಶ್ಕಾರರಿಗೆ ದ್ವಿತೀಯ ದರ್ಜೆಯ ಉಪಮ್ಯಾಜಿಸ್ಟ್ರೇಟರ್ ಅಧಿಕಾರವನ್ನು ನೀಡಲಾಯಿತು. ಮುಂದೆ ೧೮೭೪ರಲ್ಲಿ ಅಮಲ್ದಾರರ ನ್ಯಾಯಾಂಗ ಕಾರ್ಯಭಾರವನ್ನು ಮುನ್ಸೀಫರಿಗೆ ವರ್ಗಾಯಿಸಲಾಯಿತು. ಅಲ್ಲದೇ ಸಿವಿಲ್ ದಾವೆಗಳ ನಿರ್ವಹಣೆಯನ್ನೂ ಇವರಿಗೆ ನೀಡಲಾಯಿತು.

ಕ್ರಿಮಿನಲ್ ನ್ಯಾಯಾಡಳಿತಕ್ಕೆ ಸಂಬಂಧಿಸಿದಂತೆ ೧೮೭೨ರ ಕಾಯ್ದೆಯು ಇಡೀ ರಾಷ್ಟ್ರದಲ್ಲಿ ಜಾರಿಯಲ್ಲಿದ್ದು, ೧೮೮೦ರಲ್ಲಿ ಮುನ್ಸೀಫರನ್ನು ಪದನಿಮಿತ್ತ ತಾಲೂಕು ದಂಡಾಧಿಕಾರಿಯೆಂದೂ ಸ್ವೀಕರಿಸಲಾಯಿತು. ಮುಂದೆ ೧೯೦೭ರಲ್ಲಿ ಅಮಲ್ದಾರರನ್ನು ಮ್ಯಾಜಿಸ್ಟ್ರೇಟ್ ಕರ್ತವ್ಯದಿಂದ ಸಂಪೂರ್ಣ ಮುಕ್ತಗೊಳಿಸುವುದರ ಜೊತೆಗೆ ಕ್ರಿಮಿನಲ್ ಮೊಕದ್ದಮೆಗಳನ್ನೂ ಮುನ್ಸೀಫರಿಗೆ ವಹಿಸಲಾಯಿತು. ಕ್ರಿಮಿನಲ್ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಸಹಾಯಕ ಪೋಲೀಸ್ ಸೂಪರಿಂಟೆಂಡೆಂಟ್ ಹಾಗೂ ಅಮಲ್ದಾರರಿಗೆ ತಾಲೂಕು ಮಟ್ಟದಲ್ಲಿ ಅಧಿಕಾರವನ್ನು ನೀಡಲಾಯಿತು. ೧೮೮೯ರಲ್ಲಿ ಕ್ರಿಮಿನಲ್ ಪ್ರೊಸೀಜ಼ರ್ ಕೋಡನ್ನು ಸಂಸ್ಥಾನದಲ್ಲಿ ಜಾರಿಗೆ ತಂದು ಮುನ್ಸೀಫರಿಗೆ ತಾಲೂಕು ಮ್ಯಾಜಿಸ್ಟ್ರೇಟರ ಅಧಿಕಾರವನ್ನು ನೀಡಲಾಯಿತು. ಮುಂದೆ ೧೯೨೫ರ ವೇಳೆಗೆ ತಾಲೂಕು ಮಟ್ಟದಲ್ಲಿ ದ್ವಿತೀಯ ದರ್ಜೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಆರಂಭಿಸಲಾಯಿತು.

ಏಕೀಕರಣದ ನಂತರ ರಾಜ್ಯದಲ್ಲಿ ಕರ್ನಾಟಕ ನಾಗರೀಕ ಸಂಹಿತೆ ಸಿವಿಲ್ ಕೋಡ್ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಅದರಂತೆ ಈ ತಾಲೂಕಿನಲ್ಲೂ ಮುನ್ಸೀಫ್ ನ್ಯಾಯಾಲಯವನ್ನು ಆರಂಭಿಸಲಾಯಿತು. ಅಲ್ಲದೆ ೧೯೬೪ರ ಕರ್ನಾಟಕ ಸಿವಿಲ್ ಕೋರ್ಟು ಕಾಯ್ದೆಯನ್ವಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಏಕರೂಪತೆಯನ್ನು

ತರಲಾಯಿತು. ಮುಂದೆ ಅದಕ್ಕೂ ಹೆಚ್ಚಿನ ಮೌಲ್ಯದ ಸಿವಿಲ್ ದಾವೆಗಳನ್ನು ಜಿಲ್ಲಾ ಕೇಂದ್ರ ಮೈಸೂರಿನಲ್ಲಿದ್ದ ಮೇಲ್ದರ್ಜೆಯ ನ್ಯಾಯಾಲಯದಲ್ಲಿ ಹೂಡಿ ನ್ಯಾಯ ಪಡೆಯಬೇಕಾಗಿತ್ತು. ಈ ನ್ಯಾಯಾಲಯಗಳ ಜೊತೆಗೆ ತಾಲೂಕುಮಟ್ಟದಲ್ಲಿ ತಹಶೀಲ್ದಾರರು, ತಾಲೂಕು ಮ್ಯಾಜಿಸ್ಟ್ರೇಟ್ ಕಾರ್ಯನಿರ್ವಾಹಕರಾಗಿ ಕಾನೂನು ಮತ್ತು ಶಾಂತಿ ಪರಿಪಾಲನೆಯನ್ನು ನಿರ್ವಹಿಸುವ ಸಲುವಾಗಿ ಪೂರಕ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿದ್ದರೂ ಅವರ ಆದೇಶವನ್ನು ಜಿಲ್ಲಾ ಹಾಗೂ ಸೆಷನ್ ನ್ಯಾಯಾಧೀಶರು ಪರಿಷ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

**ತಾಲೂಕು ಕಾನೂನು ನೆರವು ಸಮಿತಿ :** ಡಿಸೆಂಬರ್ ೧೯೮೩ರಲ್ಲಿ ಕಾನೂನು ನೆರವು ಸಮಿತಿಯು ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು, ದುಡಿಯುವ ಹಾಗೂ ದುರ್ಬಲ ವರ್ಗದವರ ಕಾನೂನು ನೆರವು ಹಾಗೂ ಸಲಹೆ ಕೇಂದ್ರವು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ತಾಲೂಕು ಕಾನೂನು ಸಮಿತಿಯು ಎಂಟು ಸಾವಿರರೂ.ಗಿಂತ ಕಡಿಮೆ ವಾರ್ಷಿಕ ಆದಾಯವಿರುವವರಿಗೆ, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದವರಿಗೆ, ವಿಧವೆಯರಿಗೆ, ರಕ್ಷಣಾ ಇಲಾಖೆಯ ನೌಕರರಿಗೆ ಹಾಗೂ ಮಾಜಿಸೈನಿಕರಿಗೆ ಉಚಿತ ಕಾನೂನು ಸಲಹೆ, ಸೂಟ್, ಮನವಿ, ಇತರೆ ದಾವೆ, ಕ್ರಿಮಿನಲ್ ಮೊಕದ್ದಮೆ ಮುಂತಾದವನ್ನು ನ್ಯಾಯಾಲಯದಲ್ಲಿ ಹೂಡುವಲ್ಲಿ, ಕಂದಾಯ ಅಧಿಕಾರಿಗಳ ಮುಂದೆ ಅಹವಾಲು ಸಲ್ಲಿಸುವಲ್ಲಿ, ನೋಟೀಸ್ ಜಾರಿಗೊಳಿಸುವಲ್ಲಿ ಉಚಿತ ಕಾನೂನು ಸೇವೆಯನ್ನು ಒದಗಿಸಬೇಕಾಗಿತ್ತು. ಹಿರಿಯ ವಿಭಾಗೀಯ ಸಿವಿಲ್ ನ್ಯಾಯಾಧೀಶರು ಇದರ ಅಧ್ಯಕ್ಷರಿದ್ದು, ಕಿರಿಯ ವಿಭಾಗೀಯ ಸಿವಿಲ್ ನ್ಯಾಯಾಧೀಶರು ಸದಸ್ಯರಿರುತ್ತಾರೆ.

ತಾಲೂಕು ಕೇಂದ್ರದಲ್ಲಿ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಕಚೇರಿಯು ೧೯೭೭ರಿಂದ ಕಾರ್ಯನಿರ್ವಹಿಸುತ್ತಿದೆ. ಅದು ಸರ್ಕಾರದ ಪರವಾಗಿ ಹೂಡಲಾಗುವ ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆಗಳ ವಕಾಲತ್ತನ್ನು ಮುನ್ಸೀಫ್ ಹಾಗೂ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿ ವಹಿಸುತ್ತದೆ.

ತಾಲ್ಲೂಕಿನ ಜನ ಅರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದಿದ್ದು ಇವರ ಅನುಕೂಲಕ್ಕಾಗಿ ನ್ಯಾಯಾಲಯದಲ್ಲೆ ಉಚಿತ ಕಾನೂನು ನೆರವು ಸೌಲಭ್ಯ ದೊರೆಯುತ್ತಿದೆ. ೧೯೮೮ರಲ್ಲಿ ಪಿರಿಯಾಪಟ್ಟಣದಲ್ಲಿ ಸಿವಿಲ್ ಮತ್ತು ಜೆ.ಎಂ.ಎಫ್. ಸಿ. ನ್ಯಾಯಾಲಯ ಪ್ರಾರಂಭವಾಯಿತು.

**ಕಾರಾಗೃಹ :** ಪ್ರಾಚೀನ ಕಾಲದಿಂದಲೂ ಅಪರಾಧಿಗಳನ್ನು ಬಂಧನದಲ್ಲಿಡುವುದು ಸಾಮಾನ್ಯವಾಗಿದ್ದು, ಗ್ರಾಮದ ಚಾವಡಿಗಳಲ್ಲಿ, ಸೆರೆಮನೆಗಳಲ್ಲಿ ಬಂಧನದಲ್ಲಿಡಲಾಗುತ್ತಿತ್ತು. ಗಂಗ ಅರಸ ಇಮ್ಮಡಿ ಶಿವಮಾರನು ಮೂರು ಬಾರಿ ಬಂಧನದಲ್ಲಿದ್ದ ಅಂಶ ಆ ಕಾಲದ ಶಾಸನಗಳಿಂದ ವೇದ್ಯವಾಗುತ್ತದೆ. ಗಂಗರ ರಾಜಧಾನಿಯಾಗಿದ್ದ ತಲಕಾಡಿನಲ್ಲಿ ಆ ಕಾಲದಲ್ಲೆ ಸೆರೆಮನೆ ಇದ್ದು, ರಾಜದ್ರೋಹಿ, ಯುದ್ಧಕೈದಿ ಅಪರಾಧಿಗಳನ್ನು ಸೆರೆಮನೆಗೆ ದೂಡುವುದು ಸಾಮಾನ್ಯವಾಗಿದ್ದು, ಮರಣದಂಡನೆಯನ್ನೂ ಕೆಲವೊಮ್ಮೆ ವಿಧಿಸಲಾಗುತ್ತಿತ್ತು.

ಬ್ರಿಟಿಷರ ಆಗಮನದೊಂದಿಗೆ ವ್ಯವಸ್ಥಿತ ಜೈಲ್ ಆಡಳಿತ ಅಸ್ತಿತ್ವಕ್ಕೆ ಬಂದು ತಾಲೂಕು ಮಟ್ಟದಲ್ಲಿದ್ದ ಲಾಕಪ್ಪುಗಳ ಜವಾಬ್ದಾರಿಯನ್ನು ಮುನ್ಸೀಫ್/ಅಮಲ್ದಾರ್ ಅಥವಾ ಉಪ ಅಮಲ್ದಾರರಿಗೆ ವಹಿಸಲಾಯಿತು. ಆದರೆ ೧೮೬೮ರ ನಂತರ ಲಾಕ್‌ಅಪ್‌ಗಳ ಹೊಣೆಯನ್ನು ಉಪಸಹಾಯಕ ಇಲ್ಲವೇ ಸರ್ಜನ್ ಶ್ರೇಣಿಯ ವೈದ್ಯಕೀಯ ಅಧಿಕಾರಿಗಳಿಗೆ ವಹಿಸಲಾಯಿತು. ೧೯೦೪-೦೫ರ ವೇಳೆಗೆ ಕೆಲವೆಡೆ ಲಾಕಪ್ಪುಗಳ ಉಸ್ತುವಾರಿಗೆಂದು ವಿಶೇಷ ಉಪರಿಜಿಸ್ಟ್ರಾರರನ್ನು ನೇಮಿಸಲಾಗಿತ್ತು. ಏಕೀಕರಣ ನಂತರ ಪ್ರತೀ ಪೊಲೀಸ್ ಠಾಣೆಯಲ್ಲೂ ಲಾಕಪ್ಪುಗಳಿದ್ದು, ಶಿಕ್ಷೆ ವಿಧಿಸಲ್ಪಟ್ಟ ನಂತರ ಅಪರಾಧಿಗಳನ್ನು ಮೈಸೂರಿನಲ್ಲಿರುವ ಜಿಲ್ಲಾ ಕೇಂದ್ರಕಾರಾಗೃಹದಲ್ಲಿ ಬಂಧನದಲ್ಲಿಡಲಾಗುತ್ತದೆ.

**ಅಗ್ನಿ ಶಾಮಕ ಸೇವೆಗಳು :** ತಾಲೂಕಿನಲ್ಲಿ ಅಗ್ನಿಶಾಮಕ ಠಾಣೆ ಇರುವುದಿಲ್ಲ. ಅನಾಹುತ ಸಂಭವಿಸಿದಾಗ ಹುಣಸೂರಿನಿಂದ ಕರೆಸಿಕೊಳ್ಳಬೇಕಾಗಿದೆ. ತಾಲೂಕಿನಲ್ಲಿ ೩೧.೦೩.೨೦೦೪ರ ಮಾಹಿತಿಯಂತೆ ಬಂದ ತುರ್ತು ಕರೆಗಳು ೨೨ ಹಾಗೂ ಸಂರಕ್ಷಿಸಲಾದ ಆಸ್ತಿಯ ಮೌಲ್ಯವು ರೂ. ೩.೯೧ ಲಕ್ಷಗಳು.

## ಇತರ ಇಲಾಖೆಗಳು

ಪ್ರಜೆಗಳ ಸರ್ವಾಂಗೀಣ ಪ್ರಗತಿಗಾಗಿ ಸರ್ಕಾರವು ಕಾಲಕಾಲಕ್ಕೆ ರೂಪಿಸುವ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲು ಕಂದಾಯ, ಲೋಕೋಪಯೋಗಿ, ಅಬ್ಕಾರಿ, ಗ್ರಾಮೀಣಾಭಿವೃದ್ಧಿ, ಸಾರಿಗೆ ಮುಂತಾದ ೧೧೦ಕ್ಕೂ ಹೆಚ್ಚು ಸರ್ಕಾರಿ ಇಲಾಖೆಗಳು ಹಾಗೂ ಹಲವಾರು ಸಾರ್ವತ್ರಿಕ ನಿಗಮಗಳು ರಾಜ್ಯದಲ್ಲಿ ಅಸ್ತಿತ್ವದಲ್ಲಿವೆ. ಅಗತ್ಯಕ್ಕನುಗುಣವಾಗಿ ವಿವಿಧ ಇಲಾಖೆಯ ಕಚೇರಿಗಳು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆ ಹಿನ್ನೆಲೆಯಲ್ಲಿ ತಾಲೂಕಿನಲ್ಲಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿ ಹಾಗೂ ನಿಗಮಗಳ ಬಗ್ಗೆ ಮಾಹಿತಿಯನ್ನಿಲ್ಲಿ ನೀಡಲಾಗಿದೆ.

**ಕೃಷಿ ಇಲಾಖೆ :** ಕೃಷಿ ಅಭಿವೃದ್ಧಿಗೆ ಸಂಬಂಧಿಸಿದಂತೆ ತಾಂತ್ರಿಕ ಸಲಹೆ ನೀಡಲು ಕಾರ್ಯಾಗಾರ, ತರಬೇತಿ, ಪ್ರಾತ್ಯಕ್ಷಿಕೆ, ಉತ್ತಮ ಬೆಳೆ ಸ್ಪರ್ಧೆ, ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ತಾಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿದೆ. ಅವರ ನೆರವಿಗೆ ಸಹಾಯಕ ಕೃಷಿ ಅಧಿಕಾರಿ, ಕೃಷಿ ವಿಸ್ತರಣಾಧಿಕಾರಿ, ಕೃಷಿ ಸಹಾಯಕ ಹಾಗೂ ಇತರ ಸಿಬ್ಬಂದಿಗಳಿರುತ್ತಾರೆ.

**ಶಿಕ್ಷಣ ಇಲಾಖೆ :** ಗ್ರಾಮೀಣ ಭಾಗದಲ್ಲಿ ಶಿಕ್ಷಣ ಪ್ರಸರಣಕ್ಕೆ ಸಂಬಂಧಿಸಿದಂತೆ, ಕಾರ್ಯನಿರ್ವಹಿಸುತ್ತಿರುವ ಸಹಾಯಕ ಶಿಕ್ಷಣಾಧಿಕಾರಿಗಳ ಕಚೇರಿಯು ತಾಲೂಕು ಕೇಂದ್ರದಲ್ಲಿದೆ. ಅವರ ನೆರವಿಗೆ ಶಾಲಾನಿರೀಕ್ಷಕರು, ಹಾಗೂ ಇತರ ಸಿಬ್ಬಂದಿ ವರ್ಗವಿದೆ. ಇತ್ತೀಚೆಗೆ ಈ ಕಚೇರಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ದರ್ಜೆಗೆ ಏರಿಸಲಾಗಿದ್ದು, ಸಹಾಯಕ

ಶಿಕ್ಷಣಾಧಿಕಾರಿಗಳೂ ಅವರ ನಿಯಂತ್ರಣದಲ್ಲಿರುತ್ತಾರೆ. ಸರ್ವಶಿಕ್ಷಣ ಅಭಿಯಾನ, ಅಕ್ಷರ ದಾಸೋಹ, ಸೈಕಲ್ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ತಾಲೂಕು ಮಟ್ಟದಲ್ಲಿ ಈ ಕಚೇರಿಯು ನಿರ್ವಹಿಸುತ್ತದೆ.

**ತೋಟಗಾರಿಕೆ ಇಲಾಖೆ :** ತೋಟಗಾರಿಕೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ, ತಾಲೂಕು ಮಟ್ಟದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರೀಕ್ಷಕರ ಕಚೇರಿಯು ಕಾರ್ಯನಿರ್ವಹಿಸುತ್ತಿದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿದೆ. ಇವರು ನಂಜನಗೂಡಿನಲ್ಲಿರುವ ಉಪವಿಭಾಗೀಯ ತೋಟಗಾರಿಕೆ ಅಧಿಕಾರಿಗಳ ಅಧೀನಕ್ಕೊಳಪಡುತ್ತಾರೆ.

**ಪಶುಸಂಗೋಪನೆ ಮತ್ತು ವೈದ್ಯಕೀಯ ಸೇವೆ :** ತಾಲೂಕು ಮಟ್ಟದಲ್ಲಿ ಪಶು ಚಿಕಿತ್ಸಾಲಯ ಹಾಗೂ ಗ್ರಾಮೀಣ ಪಶು ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಉಸ್ತುವಾರಿಗೆ ತಾಲೂಕುಕೇಂದ್ರ ಪಿರಿಯಾಪಟ್ಟಣದಲ್ಲಿ ಸಹಾಯಕ ಪಶುಸಂಗೋಪನಾ ವೈದ್ಯಾಧಿಕಾರಿಗಳ ಕಚೇರಿ ಇದ್ದು ಅವರ ನೆರವಿಗೆ ತಾಂತ್ರಿಕ ಸಹಾಯಕರೂ ಸೇರಿದಂತೆ ಇತರ ಸಿಬ್ಬಂದಿ ವರ್ಗವಿದೆ.

**ಅರಣ್ಯ ಇಲಾಖೆ :** ತಾಲೂಕು ಕೇಂದ್ರದಲ್ಲಿ ವಲಯ ಅರಣ್ಯಾಧಿಕಾರಿಗಳ ಕಚೇರಿ ಇದೆ. ಅದರ ವ್ಯಾಪ್ತಿಗೆ ತಾಲೂಕಿನಲ್ಲಿರುವ ಅರಣ್ಯ ಪ್ರದೇಶಗಳು ಒಳಪಡುತ್ತವೆ. ಅರಣ್ಯ ರಕ್ಷಣೆ, ಅರಣ್ಯೀಕರಣ ಮುಂತಾದ ಅರಣ್ಯಾಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುವ ಹೊಣೆ ವಲಯ ಅರಣ್ಯಾಧಿಕಾರಿಗಳದಾಗಿದ್ದು, ನೆರವಿಗೆ ಸಿಬ್ಬಂದಿ ವರ್ಗವಿದೆ.

**ಕಾರ್ಮಿಕರ ರಾಜ್ಯ ವಿಮಾ (ಇ.ಎಸ್.ಐ) ಚಿಕಿತ್ಸಾಲಯ :** ರಾಜ್ಯ ಸರ್ಕಾರದ ವಿಮಾ ಇಲಾಖೆಯ ನಿಯಂತ್ರಣದಲ್ಲಿರುವ ವಿಮಾ ಚಿಕಿತ್ಸಾಲಯವು ಕಾರ್ಯನಿರ್ವಹಿಸುತಿದ್ದು, ಕಾರ್ಮಿಕರು ಮತ್ತವರ ಕುಟುಂಬವರ್ಗಕ್ಕೆ ವೈದ್ಯಕೀಯ ತಪಾಸಣೆ, ಔಷಧಿ ವಿತರಣೆ ಹಾಗೂ ಆರ್ಥಿಕ ನೆರವನ್ನೂ ಉಚಿತವಾಗಿ ನೀಡುವಲ್ಲಿ ನೆರವಾಗುತ್ತಿದೆ.

**ನೀರಾವರಿ ಇಲಾಖೆ :** ತಾಲೂಕಿಗೆ ಸಂಬಂಧಿಸಿದಂತೆ ನೀರಾವರಿ ಸೌಕರ್ಯವನ್ನು ನಿರ್ವಹಿಸಲು ಹಾಗೂ ಅಭಿವೃದ್ಧಿಪಡಿಸಲು ತಾಲೂಕು ಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ ಇದೆ. ಅವರ ಅಧೀನದಲ್ಲಿ ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ಹಾಗೂ ಇತರ ಸಿಬ್ಬಂದಿ ವರ್ಗವಿದೆ.

**ಲೋಕೋಪಯೋಗಿ ಇಲಾಖೆ (ಸಂಪರ್ಕ ಮತ್ತು ಕಟ್ಟಡ) :** ತಾಲೂಕು ಮಟ್ಟದಲ್ಲಿ ರಾಜ್ಯ ಹೆದ್ದಾರಿ ಹಾಗೂ ಪ್ರಮುಖ ಜಿಲ್ಲಾ ರಸ್ತೆಗಳ ನಿರ್ವಹಣೆ, ಸೇತುವೆ ಸರ್ಕಾರಿ ಕಟ್ಟಡಗಳ ನಿರ್ಮಾಣ, ನಿರ್ವಹಣೆಗಳಿಗೆಂದೇ ಸಹಾಯಕ ಕಾರ್ಯಪಾಲಕ ಅಭಿಯಂತರರ ಉಪವಿಭಾಗೀಯ ಕಚೇರಿಯು ಕಾರ್ಯನಿರ್ವಹಿಸುತ್ತಿದೆ. ಅವರ ಅಧೀನದಲ್ಲಿ ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ತಾಂತ್ರಿಕ ಸಹಾಯಕರು ಹಾಗೂ ಇತರ

ಸಿಬ್ಬಂದಿ ವರ್ಗವಿರುತ್ತದೆ. ಮುಖ್ಯ ಕಾರ್ಯಪಾಲಕ ಅಭಿಯಂತರರು (ಮೈಸೂರು) ಇವರ ಮೇಲಧಿಕಾರಿಗಳಾಗಿರುತ್ತಾರೆ.

**ಸಣ್ಣ ನೀರಾವರಿ ಇಲಾಖೆ :** ತಾಲೂಕು ಕೇಂದ್ರ ಪಿರಿಯಾಪಟ್ಟಣದಲ್ಲಿರುವ ಈ ಇಲಾಖೆಯ ಉಪವಿಭಾಗೀಯ ಕಚೇರಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಿರುತ್ತಾರೆ. ಅವರ ನೆರವಿಗೆ ಸಹಾಯಕ ಹಾಗೂ ಕಿರಿಯ ಅಭಿಯಂತರರೂ ಸೇರಿದಂತೆ ಇತರ ಸಿಬ್ಬಂದಿ ವರ್ಗವಿದೆ. ವಿಭಾಗೀಯ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರರು ಇವರ ಮೇಲಧಿಕಾರಿಗಳಾಗಿರುತ್ತಾರೆ.

**ಸಮಾಜ ಕಲ್ಯಾಣ ಇಲಾಖೆ :** ಹಿಂದುಳಿದ ಜಾತಿ ಹಾಗೂ ಹಿಂದುಳಿದ ಪಂಗಡಗಳ ಸರ್ವಾಂಗೀಣ ಅಭ್ಯುದಯಕ್ಕಾಗಿ ತಾಲೂಕು ಸಮಾಜ ಕಲ್ಯಾಣಾಧಿಕಾರಿಯ ಕಚೇರಿ ಇದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿದೆ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಇವರ ಮೇಲಧಿಕಾರಿಗಳಾಗಿರುತ್ತಾರೆ.

**ಉಪಖಜಾನೆ :** ತಾಲೂಕು ಮಟ್ಟದಲ್ಲಿ ಸರ್ಕಾರದ ಹಣಕಾಸು ವ್ಯವಹಾರವನ್ನು ನಿರ್ವಹಿಸುವ ಇದಕ್ಕೆ ಉಪಖಜಾನಾಧಿಕಾರಿಗಳು ಮುಖ್ಯಸ್ಥರಾಗಿದ್ದು, ನೆರವಿಗೆ ಇತರ ಸಿಬ್ಬಂದಿ ವರ್ಗವಿರುತ್ತದೆ.

**ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ :** ಈ ಇಲಾಖೆಯು ಮಕ್ಕಳು ಹಾಗೂ ಮಹಿಳೆಯರ ಕಲ್ಯಾಣಕ್ಕಾಗಿ ತಾಲೂಕು ಮಟ್ಟದ ಕಾರ್ಯನಿರ್ವಹಿಸುತ್ತದೆ. ಸಿ.ಡಿ.ಪಿ.ಓ. ಇದರ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿರುವ ಇಲಾಖೆಯ ಉಪನಿರ್ದೇಶಕರು ಮೇಲಧಿಕಾರಿಯಾಗಿರುತ್ತಾರೆ.

**ಅಬಕಾರಿ ಇಲಾಖೆ :** ಪಾನನಿರೋಧ ರದ್ದಾದ ನಂತರ ೧೯೬೭ರಲ್ಲಿ ಆರಂಭಗೊಂಡ ಅಬಕಾರಿ ಇಲಾಖೆಯ ತಾಲೂಕು ವಲಯ ಕಚೇರಿಯು ತಾಲೂಕಿನಲ್ಲಿದ್ದು, ಅಬಕಾರಿ ನಿರೀಕ್ಷಕರು ಅದರ ಮುಖ್ಯಸ್ಥರಾಗಿರುತ್ತಾರೆ. ತಾಲೂಕು ಮಟ್ಟದಲ್ಲಿ ಮದ್ಯಪಾನೀಯಗಳ ಗುಣಮಟ್ಟ ಪರಿಶೀಲನೆ, ಅಕ್ರಮ ಮದ್ಯ ಸಾರಾಯಿ ತಯಾರಿಕಾ ಘಟಕಗಳ ನಿರ್ಮೂಲನೆ ಹಾಗೂ ಅಕ್ರಮ ಮದ್ಯಮಾರಾಟ ತಡೆಗಟ್ಟಲು ಅಗತ್ಯ ಕಾನೂನು ಕ್ರಮ ಕೈಗೊಳ್ಳುವುದು ಮುಂತಾದವು ಈ ಕಚೇರಿಯ ಕರ್ತವ್ಯಗಳಾಗಿದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿರುತ್ತದೆ. ಉಪ ಆಯುಕ್ತಾಧಿಕಾರಿಗಳು ಮೇಲಧಿಕಾರಿಗಳಾಗಿರುತ್ತಾರೆ.

**ಕಾರ್ಮಿಕ ಇಲಾಖೆ :** ವಿವಿಧ ವರ್ಗದ ಕಾರ್ಮಿಕರ ಕಲ್ಯಾಣಕ್ಕಾಗಿ ತಾಲೂಕು ವೃತ್ತ ಕಚೇರಿಯು ಕಾರ್ಯನಿರ್ವಹಿಸುತ್ತಿದ್ದು, ಕಾರ್ಮಿಕ ನಿರೀಕ್ಷಕರು ಕಚೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿರುತ್ತದೆ. ಜಿಲ್ಲಾ ಕಾರ್ಮಿಕ ಅಧಿಕಾರಿ ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

**ಮೀನುಗಾರಿಕೆ ಇಲಾಖೆ :** ಸಹಾಯಕ ನಿರ್ದೇಶಕರು ತಾಲೂಕು ಮಟ್ಟದಲ್ಲಿ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಾಗಿದ್ದು, ಮೀನುಮರಿ ಉತ್ಪಾದನೆ, ಪಾಲನೆ, ವಿತರಣೆ ಮುಂತಾದ ಮೀನು ಕೃಷಿ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಹೊಣೆಯನ್ನು ಹೊಂದಿದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿರುತ್ತದೆ. ಹಿರಿಯ ಸಹಾಯಕ ನಿರ್ದೇಶಕರು ಇವರ ಮೇಲಧಿಕಾರಿಗಳಾಗಿರುತ್ತಾರೆ.

**ಗ್ರಂಥಾಲಯ ಇಲಾಖೆ :** ತಾಲೂಕು ಮಟ್ಟದಲ್ಲಿ ಸಾಹಿತ್ಯಾಸಕ್ತಿಯನ್ನು ವೈಚಾರಿಕತೆಯನ್ನೂ ನಾಗರಿಕ ಪ್ರಜ್ಞೆಯನ್ನೂ ಜಾಗೃತಗೊಳಿಸುವ ದೃಷ್ಟಿ ಉದ್ದೇಶಗಳಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ತಾಲೂಕು ಗ್ರಂಥಾಲಯವು ಪಿರಿಯಾಪಟ್ಟಣದಲ್ಲೂ, ಗ್ರಾಮೀಣ ಗ್ರಂಥಾಲಯಗಳು ಹಾಗೂ ಗ್ರಂಥ ವಿತರಣಾ ಕೇಂದ್ರಗಳು ತಾಲೂಕಿನ ವಿವಿಧೆಡೆ ಕಾರ್ಯನಿರ್ವಹಿಸುತ್ತಿವೆ. ಅಲ್ಲದೇ ಗ್ರಾಮಪಂಚಾಯ್ತಿಗಳಲ್ಲಿ ಗ್ರಂಥಾಲಯ ಸ್ಥಾಪಿಸುವ ಯೋಜನೆಯಂತೆ ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ. ತಾಲೂಕು ಕೇಂದ್ರದಲ್ಲಿ ಗ್ರಂಥಾಲಯ ಸಹಾಯಕರು ಹಾಗೂ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಗ್ರಂಥಾಲಯ ಮೇಲ್ವಿಚಾರಕರು ಕಾರ್ಯನಿರ್ವಹಿಸುತ್ತಾರೆ.

**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ :** ಹಿಂದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಂದು ಕರೆಯಲ್ಪಡುತ್ತಿದ್ದ ಇದನ್ನು ೧೯೯೯ರಲ್ಲಿ ವಿಭಜಿಸಿದ ಪರಿಣಾಮವಾಗಿ ಇದು ರೂಪುಗೊಂಡಿತು. ತಾಲೂಕು ಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಕಚೇರಿ ಇದ್ದು, ಅವರ ನೆರವಿಗೆ ಸಹಾಯಕ ಹಾಗೂ ಕಿರಿಯ ಎಂಜಿನಿಯರುಗಳು ಮೀಟರ್ ರೀಡರ್ ಹಾಗೂ ಇತರ ಸಿಬ್ಬಂದಿ ವರ್ಗವಿದೆ.

* * * *